₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIV - 8 AUGUST 2016

PAGES 16



## 70ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com



## ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1938ರ ಶ್ರೀ ದುರ್ಮುಖಿ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ರವಿವಾರ 04.09.2016 ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ ಸೋಮವಾರ 05.09.2016 ರಂದು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ದಶಮಿ ಭಾನುವಾರ ದಿನಾಂಕ 11.09.2016ರ ವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ 11.09.2016ನೇ ಭಾನುವಾರ ಬೆಳಿಗ್ಗೆ 9.00 ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ 01.09.2016 ರೊಳಗೆ ತಲುಪಿಸಿರಿ ಅಥವಾ ಜಟಚುಟ ಮಾಡಿ.

*ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು*

*ವಿ.ಸೂ.*

1. *ಸೇವಾರ್ಥ ನಡೆಸಲಿಚ್ಛಿಸುವವರು 251/– ರೂ.ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.*
2. *ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 01.09.2016 ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.*

*ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. 3000/– ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.*

## 64th Year of Shri Swarna Gauri and Shri Mahaganapathi Pooja

*In keeping with its glorious tradition, your Association is conducting Shri Swarna Gauri and Shri Mahaganapathi Pooja this year also, with all pomp and gaiety from 04th September 2016 to 11th September 2016. This event will be marked by the traditional pooja every morning and cultural programmes followed by traditional pooja in the evenings. The Visarjana will be on 11th September 2016. A detailed programme will be mailed to you in due course. Those desirous of giving "Sevartha" Rs. 251/- or more may please send their cheque to the Mysore Association office, stating the*

## ಟಿಂಗರ ಬುಡ್ಡಣ್ಣ – ಜಾನಪದ ಕಥೆಯಲ್ಲಿ ಸಮಾಜ ಬೋಧೆ



ಜುಲೈ 17, ರವಿವಾರ ಸಂಜೆ 7.30ಗೆ ಮುಂಬೈನ ಮೈಸೂರು ಅಸೋಸಿಯೇಶನ್ ಹಾಲ್ ನಲ್ಲಿ ಶ್ರೀ. ಸುಭಾಶ್ ನರೇಂದ್ರ ಅವರು ನಿರ್ದೇಸಿದ ಶ್ರೀ. ಚಂದ್ರಶೇಖರ ಪಾಟೀಲರು ಬರೆದ 'ಟಿಂಗರ ಬುಡ್ಡಣ್ಣ' ಎಂಬ ಜಾನಪರ ಕಥೆಯನ್ನಾಧರಿಸಿದ ಕಲಾತ್ಮಕ ಕನ್ನಡ ಚಲನಚಿತ್ರ ಪ್ರದರ್ಶನವಿತ್ತು. ಮೈಸೂರು ಅಸೋಸಿಯೇಶನ್ನಿನ ಅಧ್ಯಕ್ಷರೂ, ಕಾರ್ಯಕಾರಿ ಸಮಿತಿಯ ಸದಸ್ಯರೂ, ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಭರತ್ ಕುಮಾರ್ ಪೊಲಿಪು, ಕಾರ್ಯದರ್ಶಿ ಶ್ರೀ. ಓಂದಾಸ್ ಕಣ್ಣಂಗಾರ್



ಇವರೊಡನೆ ಶ್ರೀ. ಸುಭಾಶ್ ನರೇಂದ್ರ ಹಾಗೂ ಶ್ರೀಮತಿ ವೀಣಾ ಅಠಾವಳೆ ಕೂಡ ಉಪಸ್ಥಿತರಿದ್ದರು.

ಶ್ರೀ. ಸುಭಾಶ್ ನರೇಂದ್ರ ಸ್ವತ: ಈ ಸಿನೇಮಾದ ನಿರ್ಮಾಪಕರೂ ನಟರೂ ಆಗಿರುತ್ತಾರೆ. ಇವರು ಹವ್ಯಾಸಿ ರಂಗಭೂಮಿಯ ನುರಿತ ನಟರೂ, ನಿರ್ದೇಶಕರೂ ಆಗಿದ್ದು, ಇದು ಚಲನಚಿತ್ರದಲ್ಲಿ ಅವರ ಪ್ರಥಮ ಪ್ರಯೋಗವಾಗಿದೆ. ಸಿನೇಮಾದಲ್ಲಿ ಜಾನಪದ ಕಥೆಯ ನೈಜತೆಯನ್ನು ಕಟ್ಟಿಕೊಡಲು ಇವರು ಬಹಳ ಹೆಣಗಿದ್ದಾರೆ. ನಟನೆ, ವೇಷಭೂಷ, ರಂಗಸಜ್ಜಿಕೆ, ಪರಿಸರ ಎಲ್ಲವೂ ಒಂದಕ್ಕೊಂದು ಪೂರಕವಾಗಿ ಪರಿಪೂರ್ಣ ಚಿತ್ರಣ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಈ ಚಲನಚಿತ್ರಕ್ಕೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳು ಬಂದಿವೆ.

ಶ್ರೀಮತಿ ವೀಣಾ ಅಠಾವಳೆ ಅವರೂ ಕೂಡ ರಂಗಭೂಮಿಯೊಡನೆ 25 ವರ್ಷಗಳಿಂದಲೂ ನಿಕಟ ಸಂಪರ್ಕವಿಟ್ಟುಕೊಂಡವರು. ಮನೆ ಮಾತು ಮರಾಠಿ, ಜೊತೆಗೆ ಬೆಳಗಾವಿಯಲ್ಲಿ ವಾಸ, ಹೀಗಾಗಿ ಮೊದಲಿಗೆ ಮರಾಠಿ ರಂಗಭೂಮಿಯಲ್ಲಿ ಪಳಗಿದವರು. ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಧಾರವಾಡಕ್ಕೆ ವರ್ಗವಾಗಿ ಬಂದಂದಿನಿಂದ ಕನ್ನಡ ರಂಗಭೂಮಿಯ ಸಹವಾಸ ಆರಂಭ. ಅವರ ಈ ಚಿತ್ರದಲ್ಲಿನ ನಟನೆಗೆ ರಾಷ್ಟ್ರ ಪುರಸ್ಕಾರ ಲಭಿಸಿದೆ.

ಚಲನಚಿತ್ರ ಪ್ರದರ್ಶನದ ನಂತರ ಶ್ರೀ. ಸುಭಾಶ್ ನರೇಂದ್ರ, ಶ್ರೀಮತಿ ವೀಣಾ ಅಠಾವಳೆ ಮತ್ತು ಡಾ. ಮಂಜುನಾಥ್ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಶ್ರೀ. ಸುಭಾಶ್ ನರೇಂದ್ರ ಮತ್ತು ಶ್ರೀಮತಿ ವೀಣಾ ಅಠಾವಳೆ ಅವರು ಈ ಸಿನೇಮಾ ಮಾಡಲು ತಾವು ಪಟ್ಟ ಶ್ರಮ ಮತ್ತು ಸಾಹಸದ ಬಗ್ಗೆ ವಿವರಿಸುತ್ತ, ಈ ಚಲನಚಿತ್ರ ಪ್ರಮುಖವಾಹಿನಿ ಸಿನೇಮಾ ಮಂದಿರಗಳಲ್ಲಿ ಪ್ರದರ್ಶಿಸಲಾಗಿಲ್ಲದಿದ್ದರೂ ನಾಡಿನಾದ್ಯಂತ 60 ಪ್ರದರ್ಶನ ಕಂಡಿದೆಯೆಂತಲೂ, ಎಲ್ಲ ಕಡೆಯಿಂದ ಉತ್ತಮ ಪ್ರತಿಕ್ರಿಯೆ ದೊರತಿದ್ದು ಇನ್ನಷ್ಟು ಒಳ್ಳೆಯ ಸಿನೇಮಾಗಳನ್ನು ಮಾಡಬೇಕೆಂಬ ಅವರ ಹುಮ್ಮಸ್ಸಿಗೆ ಬಲಕೊಟ್ಟಿದೆ ಎಂದರು. ಡಾ. ಮಂಜುನಾಥ್ ನಾವು ಈ ಸಿನೇಮಾದಿಂದ ಕಲಿಯಬೇಕಾದ ಪಾಠದ ಬಗ್ಗೆ ಹೇಳುತ್ತ 'ಅಪಾತ್ರ ದಾನ ಮಾಡಬಾರದು ಮತ್ತು ಅಸಮರ್ಥರೂ ಅಜ್ಞಾನಿಗಳೂ ಆದವರ ಕೈಯಲ್ಲಿ ಅಧಿಕಾರ ಕೊಡಬಾರದು' ಎಂಬ ಎಲ್ಲ ಕಾಲಕ್ಕೂ ಸಲ್ಲುವ ಸತ್ಯ ಇಲ್ಲಿ ಜಾನಪದ ಕಥೆಯಲ್ಲೂ ಪ್ರತಿಧ್ವನಿತವಾಗಿದೆ ಎಂದರು.

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email : mysoreassociation.mumbai@gmail.com
Website : www.mysoreassociation.in

## ಸಂಪಾದಕೀಯ

# ನೇಸರು
## ತಿಂಗಳೋಲೆ

**ಸಂಪುಟ 34** **ಅಗೋಸ್ತು 2016** **ಸಂಚಿಕೆ 7**

"ಸವಿನೆನಪುಗಳು ಬೇಕು ಸವಿಯಲೀ ಬದುಕು
ಕಹಿನೆನಪು ಸಾಕೊಂದು ಮಾಸಲೀ ಬದುಕು
ಬೆಂಬಿಡದ ಆ ನೆನಪು ಮರುಕಳಿಸಿ ದಿನವೆಲ್ಲಾ
ಕಾಡುತಿದೆ ಮನವಾ..."

ರಾಮದಾಸ ನಾಯ್ಡು ಅವರು ರಚಿಸಿರುವ ಈ ಹಾಡನ್ನು ಕೇಳಿದಾಕ್ಷಣ ಬೇಡ ಬೇಡವೆಂದರೂ ನೆನಪುಗಳ ಮೆರವಣಿಗೆ ಮನದ ಮೂಲೆಯಿಂದ ಥತ್ ಎಂದು ಕಣ್ಣೆದುರಿನ ಪರದೆಯಲ್ಲಿ ಪ್ರಕಟವಾಗಲಿಕ್ಕೆ ಶುರುವಾಗುತ್ತದೆ. ನಿಜ ಹೇಳಬೇಕೆಂದರೆ ನಮ್ಮ ಬದುಕು ನೆನಪುಗಳ ಸಂಕೋಲೆಯಲ್ಲಿ ಬಂಧಿಯಾಗಿದೆ. ಮನವನ್ನು ಕಾಡಿ ಬೇಡಿ, ಗೋಳಾಡಿಸಿ, ತೊಳಲಾಡುವ ನೆನಪುಗಳು ಎಂದೂ ಮರೆಯದ ಮಾಸದ ನೆನಪುಗಳು. ಹೌದು ನೆನಪುಗಳು ನಮ್ಮ ಬದುಕಿನ ಜೀವಾಳವೆಂದರೂ ತಪ್ಪಿಲ್ಲ. ಒಂದರ್ಥದಲ್ಲಿ ನೆನಪುಗಳು ನಮ್ಮ ಜೀವನದ ಮುನ್ನುಡಿಯಿದ್ದಂತೆ. ಕಹಿ ನೆನಪುಗಳ ಕಾಟ ಅತಿಯಾದರೆ ಕೊನೆಗೆ ಕಣ್ಣೀರಾಗಿ ಮೌನದ ಮುಖೇನಕರಗಿಹೋಗುತ್ತದೆ. ತಮ್ಮ ಮನದಲ್ಲಿ ಅಡಗಿರುವ ಭಾವನೆಗಳನ್ನು ಹೊರಹಾಕಲು ಪ್ರತಿಯೊಬ್ಬರು ತಮ್ಮದೇ ಆದ ದಾರಿಯನ್ನು ಆಯ್ದುಕೊಳ್ಳುತ್ತಾರೆ. ಕೆಲವರುಮನದ ಮೂಲೆಯಲ್ಲಿ ರಾಶಿಯಾಗಿದ್ದ ನೆನಪುಗಳ ಸರಮಾಲೆಯನ್ನು ಅಕ್ಷರರೂಪದಲ್ಲಿ ಪಡಿಮೂಡಿಸುತ್ತಾರೆ. ಮನದ ಭಾವನೆಯನ್ನು ಹೊರ ಹಾಕಿದಾಗ ಕೊನೆಯಲ್ಲಿಸಿಗುವ ಆನಂದವೇ ಬೇರೆ.

ಬದುಕನ್ನು ಪ್ರತಿಯೊಬ್ಬರು ನೋಡುವ ರೀತಿನೇ ಬೇರೆ. ಜೀವನದಲ್ಲಿ ಆಶಾವಾದ ಇದ್ದರೆ ಜೀವನದ ಪ್ರತಿ ಅನುಭವವೂ ನಮಗೆ ಖುಷಿ ಕೊಡುತ್ತದೆ. ನಿರಾಶವಾದ ಜೀವನದಲ್ಲಿ ಇನ್ನೇನೂ ಉಳಿದಿಲ್ಲ ಇಲ್ಲಿಗೆ ಮುಗಿಯಿತು ಎನ್ನುವ ವೈರಾಗ್ಯವನ್ನು ಉಂಟು ಮಾಡುತ್ತದೆ.ಜೀವನದ ಪ್ರತಿಯೊಂದು ಹಂತದಲ್ಲೂ ಸುಖ ಸಿಗಬೇಕಾದರೆ, ಯಾವುದೇ ಪರಿಸ್ಥಿತಿಗೆ ಹೊಂದಾಣಿಕೆಯಾಗಲು ಮನಸ್ಸು ಸಿದ್ಧವಾಗಿರಬೇಕು. ಕೇವಲ ಪರಿಸ್ಥಿತಿಗೆ ಹೊಂದಿಕೊಂಡರೆ ಮಾತ್ರ ಅದು ಜೀವನ ಅಲ್ಲ. ಯಾವುದೇ ಅನಿವಾರ್ಯತೆಯಲ್ಲೂ ನಾವು ಕಂಡಕನಸನ್ನು ನನಸು ಮಾಡಬೇಕೆಂಬ ತುಡಿತ ನಮ್ಮಲ್ಲಿರಬೇಕು. ಮನಸ್ಸಿನಲ್ಲಿ ಅದುಮಿ ಹೋಗಿದ್ದ ಅಚ್ಚಳಿಯದ ನೂರಾರು ಸುಪ್ತ ನೆನಪುಗಳು ಗರಿಗೆದರಿದಾಗ ಇವತ್ತಿನ ನಮ್ಮ ಬದುಕಿನ ನೋವುಗಳೆಲ್ಲ ತೃಣಮಾತ್ರದಲ್ಲಿ ಮಾಯವಾಗುತ್ತದೆ. ಹಳೆಯ ನೆನಪುಗಳೊಂದಿಗೆ ಹೊಸ ಬದುಕನ್ನು ಕಟ್ಟಿಕೊಳ್ಳುತ್ತೇವೆ, ಹಾಗೆ ಹೊಸ ನೆನಪುಗಳಿಗೆ ನಾಂದಿ ಹಾಡುತ್ತೇವೆ.

ನೆನಪುಗಳನ್ನು ತೆರೆದಿಡುವಅತಿ ಆಸೆ ಈ ಕ್ಷಣಿಕತೆಯ ಬದುಕಿನಲ್ಲಿ. ಮರೆತರೂ ಮರೆಯಲಾಗದಅನುಭವಅಂದ್ರೆ ನಮ್ಮ ವಿದ್ಯಾರ್ಥಿ ಜೀವನ. ಯಾರನ್ನೇ ಕೇಳಿ 'ನಿಮ್ಮ ಜೀವನದಲ್ಲಿ ಮರೆಯಲಾಗದ ನೆನಪುಗಳು ಯಾವುವು?'ಎಂದಾಗ, ಎಲ್ಲರ ಮನ ಓಡುವುದು ಬಾಲ್ಯದ ದಿನಗಳತ್ತ, ಶಾಲಾ ಜೀವನದತ್ತ. ಅಂತರಂಗದ ಮೂಲೆಯಲ್ಲಿ ಎಡಬಿಡದೆ ಕಾಡುವ ನೆನಪುಗಳು ನಮ್ಮ ಬಾಲ್ಯದ ನೆನಪುಗಳು. ಆ ನೆನಪುಗಳನ್ನು ಮೆಲುಕು ಹಾಕಿವಾಗ ನಾವು ಮತ್ತೆ ಚಿಕ್ಕವರಾಗಿ ಉಳಿಯಬಾರದೇ ಎನ್ನುವ ಆಸೆ.

ನೆನಪಿನ ಬುತ್ತಿಯಿಂದ ನೆನಪುಗಳು ಒಂದೊಂದಾಗಿ ಎಳೆ ಎಳೆಯಾಗಿ ಬಿಚ್ಚಿಕೊಂಡಾಗ, ನಮ್ಮ ಮುಂದಿನ ಬದುಕಿಗೆ ಪ್ರೇರಣೆ ದೊರಕುತ್ತದೆ. ಮನದಲ್ಲಿ ಒಮ್ಮಲೇ ಉತ್ಸಾಹ ಪುಟಿಯುತ್ತದೆ. ನಮಗೆ ಅರಿವಿಲ್ಲದೆ ನಮ್ಮ ಮುಖದಲ್ಲಿ ನವಿರಾದ ಮಂದಹಾಸ ಹೊರಸೂಸುತ್ತದೆ. ನೆನಪುಗಳಲ್ಲಿ ಎರಡು ವಿಧ. ಒಂದು ಕೆಲವು ನೆನಪುಗಳು ಆನಂದವನ್ನು, ಉಲ್ಲಾಸವನ್ನು ತಂದುಕೊಟ್ಟರೆ, ಇನ್ನು ಕೆಲವು ನೆನಪುಗಳು ಮನಸ್ಸಿಗೆ ನೋವನ್ನು ತಂದುಕೊಡುತ್ತದೆ. ಒಮ್ಮೊಮ್ಮೆ ಕಹಿ ನೆನಪುಗಳು ಮನಸ್ಸಿಗೆ ಲಗ್ಗೆ ಇಟ್ಟಾಗ ಮತ್ತದೇ ನೋವು...ಇವುಗಳನ್ನು ಮರೆಯಬೇಕೆಂದರೂ ಮರೆಯಲಾಗದು. ಆಗ ನಮ್ಮ ಜೀವನದಲ್ಲಿ ಸಂಭವಿಸಿದ ಸಿಹಿನೆನಪುಗಳ ಮೊರೆಹೋಗಬೇಕು. ಈ ಜೀವನ ಎನ್ನುವುದೇ ಒಂದು ಮತ್ತೊಂದನ್ನು ಆಶ್ರಯಿಸಿ ಬದುಕುವುದು. ಚಪ್ಪಾಳೆ ತಟ್ಟಲಿಕ್ಕೆ ಎರಡು ಕೈಗಳು ಬೇಕೇ ಬೇಕು. ಸಮಸ್ಯೆಯಲ್ಲಿ ಪರಿಹಾರವೂ ಇದೆ ಎನ್ನುವುದನ್ನು ಮರೆಯುವಂತಿಲ್ಲ. ಹಾಗೆಯೇಈ ಹಳೆಯ ನೆನಪುಗಳು ಹೊಸ ಬದುಕಿಗೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತದೆ.

ಹೊಸ ಬದುಕಿಗೆ ಹಳೆಯ ನೆನಪುಗಳ ಬುನಾದಿ ಮಾಡಿಕೊಂಡು ಬದುಕನ್ನು ಸಾಗಿಸಬೇಕಾಗುತ್ತದೆ. ಯಾವುದೇ ಪರಿಸ್ಥಿತಿಯಲ್ಲಿ ಜೀವನದ ಆನಂದವನ್ನು ಕಳೆದುಕೊಳ್ಳಬಾರದು. ಬದುಕು ಪರಿಪೂರ್ಣವಾಗಬೇಕಾದರೆ ಹಳೆಯ ನೆನಪುಗಳು ಬೇಕೇ ಬೇಕು. ನೆನಪುಗಳನ್ನು ಇರೋದೇ ಸವಿಯಲಿಕ್ಕಾಗಿ ಅಲ್ಲವೇ?

**– ಡಾ. ಜ್ಯೋತಿ ಸತೀಶ್**

# ಸದಾನಂದ ಸುವರ್ಣರ ಸಿದ್ಧಿ ಸಾಧನೆಯನ್ನು ಎಳೆಎಳೆಯಾಗಿ ಅನಾವರಣಗೊಳಿಸಿದ ಸಾರ್ಥಕ ಕೃತಿ 'ಸುವರ್ಣ ಸಂಪದ'

ಸುವರ್ಣ ಸಂಪದ ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ ಇವರು ಎಂ.ಫಿಲ್. ಅಧ್ಯಯನಕ್ಕೆಂದು ಮುಂಬಯಿ ಯೂನಿವರ್ಸಿಟಿಗೆ ಸಲ್ಲಿಸಿ ಪದವಿ ಪಡೆದಿರುವ ಸಂಪ್ರಬಂಧದ ಕೃತಿರೂಪ. 277 ಪುಟಗಳಲ್ಲಿ ಹರಿದು ಬಂದಿರುವ ಈ ಸುಂದರ ಕೃತಿ ಸದಾನಂದ ಸುವರ್ಣರ ಬದುಕು ಸಾಧನೆಯ ಮೇಲೆ ಬೆಳಕು ಚೆಲ್ಲುವಲ್ಲಿ ಸಫಲವಾಗಿದೆ. ಮುಂಬೈ ಯೂನಿವರ್ಸಿಟಿಯ ಕನ್ನಡ ವಿಭಾಗದ ದಕ್ಷ ಮಾರ್ಗದರ್ಶಕರಾದ ಮಿತ್ರ ಡಾ. ಜಿ. ಎನ್. ಉಪಾಧ್ಯ ಇವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ ಈ ಸಂಪ್ರಬಂಧದ ಪ್ರಕಟಿತ ಕೃತಿಗೆ ಸೂಕ್ತವಾದ ಮುನ್ನುಡಿ ಬರೆದವರು ಮುಂಬೈಯಲ್ಲಿ ಸುವರ್ಣರ ಒಡನಾಡಿಯಾಗಿದ್ದ ಮೃದು ಮನಸ್ಸಿನ ಮೋಡಿಕಾರ ಡಾ. ವ್ಯಾಸರಾವ್ ನಿಂಜೂರ್ ಅವರು.

ಈ ಸಂಪ್ರಬಂಧವನ್ನು ಸುಂದರ ಕೃತಿಯನ್ನಾಗಿಸಿದವರು ಸುವರ್ಣಗಿರಿ ಪ್ರಕಾಶನ ಮಂಗಳೂರು ಇವರು ಮುದ್ದಾದ ಮಗುವನ್ನು ಕಂಡಾಕ್ಷಣ ಎತ್ತಿಕೊಳ್ಳಲು ಮನಸ್ಸು ತುಡಿಯುವಂತೆ ಈ ಕೃತಿ ಕಂಡ ತಕ್ಷಣ ಅದನ್ನು ಎತ್ತಿ ಓದುವ ಮನಸ್ಸಾಗುತ್ತದೆ. ಕೃತಿ ಸುಂದರವಾಗಿ ಪ್ರಕಟವಾಗಿದೆ.

ಆರು ಅಧ್ಯಾಯಗಳಲ್ಲಿ ತೆರೆದುಕೊಳ್ಳುವ ಸದಾನಂದ ಸುವರ್ಣರ ಬದುಕು ಮತ್ತು ಸಾಧನೆ ಲೇಖಕಿಯ ಆಳವಾದ ಅಧ್ಯಯನವನ್ನು ನಮ್ಮೆದುರು ತಂದು ನಿಲ್ಲಿಸುತ್ತವೆ. ಇಷ್ಟೆಲ ಸಿದ್ಧಿ ಸಾಧನೆಯನ್ನು ಮಾಡಿರುವ ಈತ ನಮ್ಮವರೆಂಬ ಧನ್ಯತೆಯ ಭಾವ ನಮ್ಮ ಹೃದಯದಲ್ಲಿ ಮೂಡುತ್ತದೆ. ಭಾಷೆ ಸರಳವಾಗಿದ್ದುಕೊಂಡು ಓದಿಸಿಕೊಂಡು ಹೋಗುತ್ತದೆ. ಸದಾನಂದ ಸುವರ್ಣ ಅವರು ಬರೆದಿರುವ 'ರಂಗಾನುಭೂತಿ' ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ ಪ್ರಾಯೋಜಕತ್ವದಲ್ಲಿ ಪ್ರಕಟಗೊಂಡಿರುವ ವಿವಿಧ ಲೇಖಕರು ಬರೆದಿರುವ 'ಸುವರ್ಣರ ಬದುಕು ಮತ್ತು ಸಾಧನೆ' ನಂತರ ಪ್ರಕಟಗೊಂಡಿರುವ ಈ ಕೃತಿ ಸದಾನಂದ ಸುವರ್ಣರ 'ಬಂಗಾರದ ಬದುಕು' ಓದುಗರ ಮುಂದೆ ಸವಿಸ್ತಾರವಾಗಿ ತೆರೆದುಕೊಳ್ಳುತ್ತದೆ.

ಸದಾನಂದ ಸುವರ್ಣರು ನಟ ನಿರ್ದೇಶಕ ಸಿನಿಮಾ ನಿರ್ಮಾಪಕ, ನಿರ್ದೇಶಕ ಜನಪ್ರಿಯವೂ ಉತ್ಕೃಷ್ಟವೂ ಆಗಿರುವ ಟಿ.ವಿ. ಧಾರವಾಹಿಗಳು, ಸಾಕ್ಷ್ಯ ಚಿತ್ರಗಳು ಹಾಗೂ ಜಾಹೀರಾತುಗಳ ರೂವಾರಿ, ನಾಟಕಕಾರ, ಸಾಹಿತಿ, ಅವರಿಗೆ ಹತ್ತು ಹಲವು ಮುಖಗಳಿವೆ. ಇಲ್ಲಿ ಡಾ. ಸೀತಾಲಕ್ಷ್ಮೀ ಕರ್ಕಿಕೋಟಿಯವರು ಅವರ ಬಾಳಿನುದ್ದಕ್ಕೂ ಬೆಳಕು ತೂರಿರುವುದಲ್ಲದೆ, ಅವರ ಬಾಳಿನಲ್ಲಿ ಅನುಭವಿಸಿದ ಕಷ್ಟಕಾರ್ಪಣ್ಯ, ತವಕ ತಲ್ಲಣಗಳಿಗೆ, ಬೇನೆ ಬೇಜಾರುಗಳಿಗೆ, ನೋವು ನಲಿವುಗಳಿಗೆ ಸಂಭ್ರಮದ ಕ್ಷಣಗಳಿಗೆ ಅಕ್ಷರ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ.

ಸುವರ್ಣರು ಕ್ರಮಿಸಿ ಬಂದ ದಾರಿ ಯಾರಿಗಾದರೂ ಬೆರಗು ಹುಟ್ಟಿಸುವಂತಹುದು. 1931 ಡಿಸೆಂಬರ್ 24ರಂದು ಉಡುಪಿ ಜಿಲ್ಲೆಯ ನಂದಿಕೂರಿನ ರುಕ್ಕ ಟಿ. ಕೋಟ್ಯಾನ್ ಹಾಗೂ ಪೂವಮ್ಮ ದಂಪತಿಯವರ ಹಿರಿಯ ಮಗನಾಗಿ ಜನಿಸಿದ ಇವರ ಬದುಕೇನೂ ಹೂವಿನ ಹಾಸಿಗೆಯಾಗಿರಲಿಲ್ಲ. ತನ್ನ ಹೆತ್ತಬ್ಬೆಯನ್ನು ತನ್ನ ಹತ್ತು ವರ್ಷದ ಎಳೆಯ ಪ್ರಾಯದಲ್ಲೇ ಕಳೆದುಕೊಂಡ ಸುವರ್ಣರು ಊರಲ್ಲಿ ಐದನೆಯ ತರಗತಿಯ ವರೆಗೆ ಕಲಿತು ಹೊಸ ಬದುಕನ್ನು ಅರಸುತ್ತಾ ಮುಂಬೈಯ ಬಾಗಿಲು ಬಡಿದರು. ಇಲ್ಲಿ ಬಂದು ಮೊಗವೀರ ರಾತ್ರಿ ಶಾಲೆಯಲ್ಲಿ ಕಲಿತ ಇವರು ಬದುಕಿನಲ್ಲಿ ಬಂದ ಎಲ್ಲ ಸವಾಲುಗಳನ್ನು ಸಮಚಿತ್ತದಿಂದ ಸ್ವೀಕರಿಸಿ ಅವನ್ನೆಲ್ಲ ದಾಟುವುದಕ್ಕೆ ತನ್ನಲ್ಲಿದ್ದ ಪ್ರತಿಭೆಯನ್ನು ಬೆಳಕಿಗೊಡ್ಡಿ ಸಾಧನೆಯ ದಿಗಂತಗಳನ್ನೇರುವುದಕ್ಕೆ ಸಾಧ್ಯವಾಯಿತು.

ಸುವರ್ಣರು ತಮ್ಮ ಮುಂಬೈ ವಾಸದ ಆದಿ ಕಾಲದಲ್ಲಿ ಬೆರಳಚ್ಚುಗಾರ, ಕಾರಕೂನ, ಮಾರಾಟ ಪ್ರತಿನಿಧಿ, ರಾತ್ರಿ ಶಿಕ್ಷಕ, ಪಬ್ಲಿಸಿಟಿ ಸಂಸ್ಥೆಯ ಜಾಹೀರಾತು ವಿಭಾಗದ ಇನ್‌ಚಾರ್ಜ್, ಪೆಯಿಂಟ್ ಸೇಲ್ಸ್‌ಮ್ಯಾನ್ ಹೀಗೆ ಹಲವು ಕ್ಷೇತ್ರಗಳಲ್ಲಿ ದುಡಿದು ಕೊನೆಗೆ ತನ್ನದೇ ಆದ ಪೆಯಿಂಟ್ ಅಂಗಡಿಯನ್ನು ತೆರೆದು ಅಲ್ಲಿ ಬಣ್ಣವನ್ನು ಮಾರಿದ ಸುವರ್ಣ ಕೊನೆಗೆ ಆರಿಸಿದುದು ಬಣ್ಣದ ಬದುಕು. ಈ ಬಣ್ಣದ ಬದುಕು ಅವರಿಗೆ ನೀಡಿದ ಆತ್ಮತೃಪ್ತಿಯನ್ನು ಲೇಖಕಿ ಇಲ್ಲಿ ನವಿರಾಗಿ ತೆರೆದಿಟ್ಟಿದ್ದಾರೆ.

ಇಲ್ಲಿ ಬರುವ ಆರು ಅಧ್ಯಾಯಗಳೂ ಸುವರ್ಣರ ಬದುಕು ಮತ್ತು ಸಾಧನೆಗಳಿಗೆ ಬಣ್ಣ ತೊಡೆಯುತ್ತವೆ, ಅವರ ಬದುಕಿಗೆ ಕನ್ನಡಿ ಹಿಡಿಯುತ್ತವೆ. ಲೇಖಕಿ ಪ್ರತಿಯೊಂದು ಅಧ್ಯಾಯಗಳಿಗೆ ನೀಡಿರುವ ಶಿರೋನಾಮಗಳು ಚಿತ್ತಾಕರ್ಷಕವಾಗಿವೆ. ರಂಗಾವತರಣ, ರಂಗಚೇತನ, ರಂಗಸ್ತಂಭ, ದೃಶ್ಯ ಮಾಧ್ಯಮ ವೈವಿಧ್ಯ, ಸಾಹಿತ್ಯ ಮತ್ತು ಸಾತತ್ಯ ರಂಗ ಸಮನ್ವಯ ಇಲ್ಲಿಯ ಒಂದೊಂದು ಪುಟಗಳಲ್ಲಿ ಸುವರ್ಣರ ಚಿನ್ನದ ಬದುಕು ಅರಳುತ್ತದೆ. ಅದೇ ರೀತಿ ಸಂಶೋಧಕಿಯ ವ್ಯಾಪಕವಾದ ಅಧ್ಯಯನವನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ಕೃತಿಯ ಮೌಲ್ಯವನ್ನು ಇಲ್ಲಿ ಬಂದಿರುವ ಛಾಯಾ ಚಿತ್ರಗಳು ಹೆಚ್ಚಿಸಿವೆ ಎಂದರೆ ಅದರಲ್ಲಿ ಅತಿಶಯೋಕ್ತಿ ಯಾಗಲಾರದು.

ರಂಗಾವತರಣ ನಾಮಧೇಯದಲ್ಲಿ ಬರುವ ಈ ಸಂಶೋಧನಾ ಕೃತಿಯ ಮೊದಲು ಅಧ್ಯಾಯದಲ್ಲಿ ಕೃತಿಕಾರರು ಸುವರ್ಣ ಜೀವನಗಾಥೆ ಹಾಗೂ ಸಾಧನೆಗಳ ಮೇಲೆ ಪಕ್ಷಿನೋಟ ಬೀರಿದ್ದಾರೆ. ಕರ್ನಾಟಕದ ಮೂಲ್ಕಿಯಲ್ಲಿ ಮೊದಲ ಬೆಳಕಿನ ಕಿರಣ ಕೂಡ ಈ ಬಾಲಕ ಬದುಕು ಕಟ್ಟಿಕೊಂಡದ್ದು ಮಾಯಾನಗರಿ ಮುಂಬೈಯಲ್ಲಿ. ಇಲ್ಲಿ ಅವರು ಅನುಭವಿಸಿದ ಕಷ್ಟ ಕಾರ್ಪಣ್ಯಗಳು, ಅದರ ಮಧ್ಯೆಯೂ ಅವರಲ್ಲಿ ಪುಟಿಯುತ್ತಿದ್ದ ಜೀವನೋತ್ಸಾಹ ಅಧ್ಯಯನ ಶೀಲತೆ ಇವು ಮುಂದೆ ಅವರು ಸಮಗ್ರ ನಾಟಕರಂಗ, ತಿರುತೆರೆ, ಹಿರಿತೆರೆಯ ಕ್ಷೇತ್ರಗಳಲ್ಲಿ ಏರಿದ ಎತ್ತರವನ್ನು ಎಲ್ಲೂ ಉತ್ಪ್ರೇಕ್ಷೆಗೆ ಎಡೆ ನೀಡದಂತೆ ನಮ್ಮ ಮುಂದಿಟ್ಟಿದ್ದಾರೆ.

ದೃಶ್ಯ ಮಾಧ್ಯಮದಲ್ಲಿ ಸುವರ್ಣ ಛಾಪು ಒತ್ತಿದ್ದರೂ, ಅವರ ನಿಜವಾದ ಒಲವು ಇರುವುದು ಇಂದಿಗೂ ನಾಟಕರಂಗದಲ್ಲಿ ಅದಕ್ಕೆ ಸಾಕ್ಷಿಯಾಗಿ ಇಂದಿನವರೆಗೂ ಅವರು ಒಂದಲ್ಲ ಒಂದು ನಾಟಕವನ್ನು ನೀಡುತ್ತಾ ಬಂದಿದ್ದಾರೆ. ನಾಟಕಕಾರರಾಗಿ, ನಟರಾಗಿ, ನಿರ್ದೇಶಕರಾಗಿ ಸಂಗೀತ ಬೆಳಕು ಸಂಯೋಜಕರಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಅವರು ತಮ್ಮನ್ನು ತಾವು ತೊಡಗಿಸಿಕೊಂಡದ್ದನ್ನು ಲೇಖಕಿ ಇಲ್ಲಿ ನಮಗೆ ವಿವರಿಸುತ್ತಾರೆ.

ಮುಂಬೈಯಲ್ಲಿ ಕನ್ನಡ - ತುಳು ರಂಗ ಭೂಮಿಯ ಖ್ಯಾತ ನಿರ್ದೇಶಕನೆಂದು ಗುರುತಿಸಿಕೊಂಡ ನಂತರವೂ ರಂಗಭೂಮಿಯ ಒಳಹೊರಗನ್ನು ಅರಿತುಕೊಳ್ಳುವ ಅದಮ್ಯ ಆಸೆಯಿಂದ ನಾಟ್ಯ ಅಕಾಡೆಮಿಯ ವಿದ್ಯಾರ್ಥಿಯಾಗಿ ಡಿಪ್ಲೋಮ ಗಳಿಸಿಕೊಂಡ ಸುವರ್ಣರು ಇತರ ಭಾಷೆಗಳ ನಾಟಕವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವೀಕ್ಷಿಸುತ್ತವೆ. ತನ್ನತನವನ್ನು ಬಳಸಿಕೊಳ್ಳುತ್ತ ಕನ್ನಡ - ತುಳು ರಂಗಭೂಮಿಗೊಂದು ಹೊಸ ಆಯಾಮ ತಂದು ಕೊಟ್ಟಿದ್ದಾರೆನ್ನುವಲ್ಲಿ ಲೇಖಕಿ ಇಲ್ಲಿ ಆಳವಾದ ಅಧ್ಯಯನ ಮಾಡಿರುವುದು ತಿಳಿದು ಬರುತ್ತದೆ.

ನಟ ನಾಟಕಕಾರ, ನಿರ್ದೇಶಕ ಹಾಗೂ ರಂಗತಜ್ಞರಾಗಿ ಮುಂಬಯಿ ಹಾಗೂ ಮಂಗಳೂರಿನಲ್ಲಿ ತನ್ನದಾದ ಛಾಪನ್ನು ಒಂದು ಹೊಸ ಅಭಿವ್ಯಕ್ತಿ ಒದಗಿಸಿದ ಸುವರ್ಣರ ಸಾಧನೆಗಳನ್ನು ಲೇಖಕಿ ಇಲ್ಲಿ ತಲಸ್ಪರ್ಶಿಯಾಗಿ ಸಾದರ ಪಡಿಸಿದ್ದಾರೆ. ಸುವರ್ಣರ ವ್ಯಕ್ತಿತ್ವ ಸರಳವಾಗಿದ್ದರೂ ರಂಗಭೂಮಿಯ ವಿಷಯ ಬಂದಾಗ ಅವರೆಂದೂ ಯಾವುದೇ ರಾಜೀ ಸೂತ್ರಕ್ಕೆ ಒಳಗಾಗುವವರಲ್ಲ. ರಂಗದ ಮೇಲಿನ ಪ್ರತಿಯೊಂದು ವಿಷಯಕ್ಕೂ ಅವರು ಒಂದೇ ರೀತಿಯ ಮಹತ್ವ ನೀಡುತ್ತಿದ್ದರು.

✍ ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರ್

ನಾಟಕಕಾರರಾಗಿ, ನಟರಾಗಿ ಪ್ರಶಸ್ತಿ ವಿಜೇತ ಚಿತ್ರಗಳ ರೂವಾರಿಯಾಗಿ ಸುವರ್ಣ ಬದುಕಿಗೆ ಲೇಖಕಿ ಬೆಳಕು ತೂರಿರುವ ಪರಿಯಿಂದ ಕೃತಿ ಓದಿಸಿಕೊಂಡು ಹೋಗುತ್ತದೆ.

ಕರ್ನಾಟಕದ ಹೆಸರಾಂತ ರಂಗಕರ್ಮಿಯಾಗಿ ಕಿರುತೆರೆ, ಹಿಂತೆರೆಗಳ ಪ್ರಶಸ್ತಿ ವಿಜೇತ ನಿರ್ಮಾಪಕರಾಗಿ ದೃಷ್ಟಿ ಫಿಲ್ಮ್ ಸೊಸೈಟಿಯ ರೂವಾರಿಯಾಗಿ, ಕಾದಂಬರಿಕಾರರಾಗಿ, ಕಥೆಗಾರರಾಗಿ, ನಾಟಕಕಾರರಾಗಿ, ಪ್ರಕಾಶಕರಾಗಿ, ಸಾಕ್ಷ್ಯಚಿತ್ರಗಳ ನಿರ್ಮಾಪಕರಾಗಿ ಜಾನಪದ ಸಾಹಿತ್ಯದಲ್ಲಿಯೂ ಆಸಕ್ತಿ ಹೊಂದಿದವರಾಗಿ, ಕಾರಂತೋತ್ಸವ ಸಂಘಟಕರಾಗಿ, ಅಧ್ಯಾಪಕರಾಗಿ, ರಂಗಿನ ವ್ಯಾಪಾರಿಯಾಗಿ, ದಾನಿಯಾಗಿ ಸದಾನಂದ ಸುವರ್ಣರ ಆದಮ್ಯಾ ಚೇತನವನ್ನು ಇಲ್ಲಿ ಡಾ. ಸೀತಾಲಕ್ಷ್ಮಿ ಇವರು ತೆರೆದಿಟ್ಟ ರೀತಿ ಅವರು ವೃತ್ತಿಯಲ್ಲಿ ಪತ್ರಕರ್ತೆ ಎನ್ನುವುದನ್ನು ಸಾಬೀತು ಪಡಿಸುತ್ತದೆ. ಒಂದು ಸಂಶೋಧನಾ ಕೃತಿಯಲ್ಲಿರಬೇಕಾದ ಎಲ್ಲ ಕಟ್ಟುಪಾಡು, ವಿಷಯ ವೈವಿಧ್ಯವನ್ನು ಈ ಕೃತಿ ಒಳಗೊಂಡಿದೆಯೆನ್ನುವುದು ನಾವು ಕೃತಿಯನ್ನು ಓದುತ್ತಾ ಹೋದಂತೆ ತಿಳಿದು ಬರುತ್ತದೆ.

ಈ ಸಂಪ್ರಬಂಧದಲ್ಲಿ ನಾನು ಅತಿಯಾಗಿ ಮೆಚ್ಚಿದ ಕೆಲವು ವಿಷಯಗಳಿವೆ. ಅವು ಇಂದೂ ಸುವರ್ಣರ ಬದುಕು ಕ್ರಿಯಾಶೀಲವಾಗಿರುವುದನ್ನು ನಮಗೆ ತಿಳಿಸುತ್ತದೆ.

ಸುವರ್ಣರ ಯೋಚನೆ ಯೋಜನೆ ಹಾಗೂ ನಿರ್ವಹಣೆಯ ರೀತಿ ಅವರ ಹೃದಯವಂತಿಕೆಗೆ ದೊಡ್ಡತನಕ್ಕೆ ಸಾಕ್ಷಿಯಾಗುತ್ತದೆ. ಎಳೆಯರಿಗೆ ಬೆಂಬಲವಾಗುವ ಸಂದರ್ಭ ಸಿಕ್ಕರೆ ಅವರಿಗೆ ಇನ್ನಿಲ್ಲದಷ್ಟು ಖುಷಿಯಾಗುತ್ತದೆ. ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಹೆಸರಿನಲ್ಲಿ ಸುವರ್ಣರು ಯವ ಬರಗಾರರ ಕೃತಿಗಳನ್ನು ಪ್ರಕಟಿಸುತ್ತಾ ಪ್ರೋತ್ಸಾಹಿಸುತ್ತ ಬರುತ್ತಿದ್ದಾರೆ. ಕಿರಿಯ ತಲೆಮಾರನ್ನು ರಂಗಭೂಮಿ ಚಟುವಟಿಕೆಗೆ ಕರೆತರುವ ತರಬೇತಿ ನೀಡಿ ಸಿದ್ಧಗೊಳಿಸುವ ನಿಟ್ಟಿನಲ್ಲಿ ಅವರು ಆಸಕ್ತಿ ವಹಿಸಿದ್ದಾರೆ.

ಬಡ ವಿದ್ಯಾರ್ಥಿಗಳಿಗೆ, ಅಶಕ್ತರಿಗೆ ಯಥಾಶಕ್ತಿ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತಿದೆ. ಯುವ ಪ್ರತಿಭೆಗಳಿಗಾಗಿ ಕಾದಂಬರಿ ಸ್ಪರ್ಧೆ, ನಾಟಕ ರಚನಾ ಸ್ಪರ್ಧೆ, ಸಿನಿಮಾ, ಸ್ಕ್ರಿಪ್ಟ್ ರಚನಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೆ ಬಹುಮಾನಗಳೊಂದಿಗೆ ಉತ್ತೇಜಿಸುತ್ತಿದ್ದಾರೆ (ಪುಟ - 15).

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಂಘ, ಮುಂಬಯಿ, ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ, ಗೊರೆಗಾಂವ್ ಕನ್ನಡ ಸಂಘ, ಚಾರ್‌ಕೋಪ್ ಕನ್ನಡಿಗರ ಬಳಗ ಮೊದಲಾದ ಸಂಸ್ಥೆಗಳಿಗೆ ಸುವರ್ಣರಿಂದ ದತ್ತಿನಿಧಿ ಸಂದಾಯವಾಗಿದೆ. ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಕ್ಕೂ ಡಾ. ಶಿವರಾಮ ಕಾರಂತರ ಹೆಸರಿನಲ್ಲಿ ದತ್ತಿಯೊಂದನ್ನು ನೀಡಿದ್ದಾರೆ. ಮುಂಬಯಿ ವಿಶ್ವವಿದ್ಯಾಲಯಕ್ಕೆ ವ್ಯಕ್ತಿಯೊಬ್ಬರು ನೀಡಿದ ಮೊದಲ ದತ್ತಿ ಇದು. ಇವೆಲ್ಲ ಸುವರ್ಣರ ಉದಾರಾಂತಃ ಕರಣವನ್ನು ಸಾಬೀತು ಪಡಿಸುತ್ತದೆ (ಪುಟ - 15).

ಸುವರ್ಣರ ರಂಗಸಾಧನೆಯನ್ನು ಕಂಡು ಅಭಿಮಾನಪಟ್ಟ ಸಾಂಸ್ಕೃತಿಕ ಬೀಡು ಕಾಂತಾವರದ ಕನ್ನಡ ಸಂಘ, ಸುವರ್ಣರ ಹೆಸರಿನಲ್ಲಿ 'ಸುವರ್ಣ ರಂಗ ಸಮ್ಮಾನ' ಎಂಬ ಪ್ರಶಸ್ತಿಯನ್ನು ಸಂಸ್ಥಾಪಿಸಿ ಅದನ್ನು ವಿಶ್ವರಂಗಭೂಮಿ ದಿನಾಚರಣೆ ಅಂಗವಾಗಿ ರಂಗಕರ್ಮಿಯೊಬ್ಬರಿಗೆ ಪ್ರತಿ ಮಾರ್ಚ್ ತಿಂಗಳಲ್ಲಿ ಪ್ರದಾನಿಸುತ್ತಾ ಬಂದಿದೆ. (ಪುಟ - 19).

ವಾಸ್ತವ ರಂಗಭೂಮಿಯಲ್ಲಿ ವಿಶಿಷ್ಟ ಛಾಪು ಮೂಡಿಸಿದ ಪೃಥ್ವೀರಾಜ್ ಕಪೂರ್ ಅವರ ಹಿಂದೂಸ್ತಾನಿ ನಾಟಕಗಳು ಸುವರ್ಣರ ಮೇಲೆ ಅತ್ಯಂತ ಪ್ರಭಾವ ಬೀರಿದ್ದವು. ವಸ್ತು ತಂತ್ರ ಅಭಿನಯ ಎಲ್ಲದರಲ್ಲೂ ಅವು ಅಧಿಕೃತತೆ ಸಾದಿಸಿದ್ದವು.

ಸುವರ್ಣರು ಕಪೂರರನ್ನೇ ಒಮ್ಮೆ ಕಂಡು ಖುದ್ದಾಗಿ ಮಾತನಾಡಿಸಿದ್ದರು. ಸಚೇತನ ಪತ್ರಿಕೆಗಾಗಿ ಸಂದರ್ಶಿಸಿದ್ದರು. ನಿಮ್ಮ ಪ್ರಯೋಗಗಳ ಯಶಸ್ಸಿಗೆ ಕಾರಣಗಳೇನು? ಎಂದೂ ಕೇಳಿದ್ದರು. ಸತತ ತಾಲೀಮಿನ ಫಲವೇ ಯಶಸ್ವಿ ಪ್ರಯೋಗಕ್ಕೆ ಕಾರಣವಾಗುತ್ತದೆ ಅರಿತ ಕಪೂರರು ಪ್ರಾಂಜಲ ಮನಸ್ಸಿನಿಂದ ಉತ್ತರಿಸಿದ್ದರು. ಕಪೂರರ ಪ್ರಯೋಗಗಳ ಕುರಿತು ಸುವರ್ಣರು ನೆನಪಿಸುತ್ತ ನಾಟಕಗಳಲ್ಲಿ ನೈಜತೆಯನ್ನು ಕಟ್ಟಿ ಕಾಣಿಸುವ ಅವರ ಪ್ರಯೋಗ ಶೀಲತೆಯ ಸಮಗ್ರ ನೋಟವನ್ನೇ ಕಣ್ಮುಂದೆ ತಂದುಕೊಳ್ಳುತ್ತಿದ್ದಾರೆ (ಪುಟ - 37).

ಸುವರ್ಣರ 'ಗುಡ್ಡೆದ ಭೂತ' ಅತ್ಯಧಿಕ ಪ್ರದರ್ಶನ ಕಂಡಿರುವ ನಾಟಕ. ಈ ನಾಟಕ ಇತರರಿಗೂ ಪ್ರೇರೇಪಣೆ ನೀಡಿದೆ. ವಿಜಯಕುಮಾರ್ ಶೆಟ್ಟಿಯವರಂತಹ ಹಿರಿಯ ರಂಗ ನಿರ್ದೇಶಕರೂ ಈ ನಾಟಕದಿಂದ ಪ್ರಭಾವಿತರಾಗಿ 'ಭೂತದ ಇಲ್ಲ್', 'ಒರಿಯೆ ಮಗೆ..' ಯಂಥ ನಾಟಕಗಳನ್ನು ರಚಿಸಿದ ಬಗ್ಗೆ ಸ್ವತಃ ಹೇಳಿಕೊಂಡದ್ದನ್ನು ಸುವರ್ಣರು ಜ್ಞಾಪಿಸಿಕೊಳ್ಳುತ್ತಾರೆ (ಪುಟ - 69).

ನಟನೆಯಲ್ಲಿ ಸುವರ್ಣರ ಶಕ್ತಿ, ಪ್ರತಿಭೆ ಅತ್ಯುದ್ಭುತವಾಗಿ ಅನಾವರಣಗೊಂಡದ್ದು 'ಸತ್ಯಂ ವದ ಧರ್ಮಂಚರ' ನಾಟಕದಲ್ಲಿ ಮರಾಠಿಯ ವಿದ್ಯಾನಂದನ ಪಾತ್ರಕ್ಕಿಂತ ಕನ್ನಡದ ವಿದ್ಯಾನಂದನ ಪಾತ್ರ ಚೆನ್ನಾಗಿದೆ ಎನ್ನು ಆಂಗ್ಲ ಭಾಷೆಯ ದೈನಿಕದ ವಿಮರ್ಶೆಯನ್ನು ಓದಿದ ಹಿಂದಿಯ ಖ್ಯಾತ ನಟ ಅಶೋಕ್‌ಕುಮಾರ್ ಈ ನಾಟಕ ನೋಡುವುದಕ್ಕಾಗಿಯೇ ರವೀಂದ್ರ ನಾಟ್ಯ ಮಂದಿರಕ್ಕೆ ಆಗಮಿಸಿದ್ದರು. ಪ್ರಸ್ತುತಿಯನ್ನು ಎವೆಯಿಕ್ಕದೆ ನೋಡಿ ಅನುಭವಿಸಿ ಗ್ರೀನ್ ರೂಂ ತನಕವೂ ಬಂದು, 'ಅಭಿನಯ' ಬಹಳ ಚೆನ್ನಾಗಿತ್ತು ಎಂದು ಮನದುಂಬಿ ಶ್ಲಾಘಿಸಿ ಹರಸಿದ ಹಿಂದೀ ಚಿತ್ರರಂಗದ ಮೇರು ನಟ ಅಶೋಕ್‌ಕುಮಾರ್ ಅವರನ್ನು ನೆನಪಿಸಿಕೊಳ್ಳುವಾಗ ಸುವರ್ಣರ ಕಣ್ಣಲ್ಲಿ ಹೊಸ ಕಾಂತಿ ಮಿನುಗುತ್ತದೆ. ಅಶೋಕ್‌ಕುಮಾರ್ ಅಭಿನಂದಿಸಿ ಫೋಟೋವೊಂದನ್ನು ಕಟ್ಟಿಸಿ ತಮ್ಮ ಮನಯ ಗೋಡೆಗೆ ಇಳಿಸಿ ಬಿಚ್ಚಿಟ್ಟಿದ್ದಾರೆ. ಸುವರ್ಣರು ನಿತ್ಯವೂ ಆ ಫೋಟೋ ನೋಡುತ್ತಾ ನೆನಪುಗಳನ್ನು ಮೆಲುಕು ಹಾಕುತ್ತಾರೆ. ರೋಮಾಂಚನ ಗೊಳ್ಳುತ್ತಾರೆ. ಒಂದು ರೀತಿಯಲ್ಲಿ ಅಭಿನಯದಲ್ಲಿ ಸುವರ್ಣರು ಹೊಸ ಇತಿಹಾಸದಲ್ಲಿ ಸೃಷ್ಟಿಸುವುದಕ್ಕೆ ಸಾಧ್ಯ ಮಾಡಿಕೊಟ್ಟ ನಾಟಕ ಇದು (ಪುಟ - 86).

1976ರಲ್ಲಿ ಘಟಶ್ರಾದ್ಧ ನಮಗಿಬ್ಬರಿಗೂ ಮೊದಲಚಿತ್ರ ನಿರ್ಮಾಪಕನಾಗಿ ನನ್ನದು, ನಿರ್ದೇಶಕರಾಗಿ ಕಾಸರವಳ್ಳಿ ಅವರದು ಚಿತ್ರರಂಗ ಪ್ರವೇಶ. ಗಿರೀಶ್ ಅವರು ಅದಾಗಲೇ ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ನಿರ್ದೇಶನದ ಕೋರ್ಸು ಮುಗಿಸಿ 'ಅವಶೇಷ' ಎನ್ನುವ ಕಿರುಚಿತ್ರವನ್ನು ಸಿದ್ಧಗೊಳಿಸಿದ್ದರು. ಅದಕ್ಕೆ ರಾಷ್ಟ್ರೀಯ ಪ್ರಶಸ್ತಿ ದೊರೆಯಿತು. ಈಗ ಈ 'ಘಟಶ್ರಾದ್ಧ' ಚಿತ್ರಕಥೆಯನ್ನು ಬಹಳ ಆತ್ಮಾಸ್ಥೆಯಿಂದ ಮಾಡಿದ್ದರು. ನಮಗೆ ಒಂದು ಚಿತ್ರ ಮಾಡಿ ಮುಗಿಸಿದ ಸಮಾಧಾನ ನನಗೆ ಚಿತ್ರೀಕರಣದ ಸಂದರ್ಭ ದೊರೆತ ಅನುಭವ ತೃಪ್ತಿಕರ ಎಂದು ಹೇಳಿಕೊಳ್ಳುತ್ತಾರೆ ಸುವರ್ಣರು (ಪುಟ - 131).

ಇಬ್ಬರೂ ಸಿನಿಮಾರಂಗಕ್ಕೆ ಹೊಸಬರು. ಸಾಲ ಹಾಕಿ ಮಾಡಿದ ಸಿನಿಮಾ ಹಣ ಗಳಿಸುತ್ತದೆಯೆಂಬ ಭರವಸೆ ಇಲ್ಲ. ಆದರೂ ಹುಚ್ಚು ಧೈರ್ಯ, ಸಿನಿಮಾ ನಿರೀಕ್ಷೆಗಿಂತ ಹೆಚ್ಚು ಓಡಿತು. ಚಿನ್ನ ತಂದು ಕೊಟ್ಟದ್ದು ಇತಿಹಾಸ. ಸುವರ್ಣರು ಚಿತ್ರಕ್ಕಾಗಿ ಹೂಡಿದ ಬಂಡವಾಳ ಎರಡೂವರೆ ಲಕ್ಷರೂಪಾಯಿ. ಅದು ಮರಳಿ ಬರುತ್ತದೆ ಅನ್ನುವ ಯಾವ ಭರವಸೆಯೂ ಅವರಲ್ಲಿ ಉಳಿದಿರಲಿಲ್ಲ. ಆದರೂ ಹಣ ತೊಡಗಿಸಿದ್ದು ಬಹಳ ದೊಡ್ಡ ರಿಸ್ಕ್ ಆಗಿತ್ತು. ಗೆಳೆಯರೆಲ್ಲ ಹೆದರಿಸಿದ್ದರು. 'ಒಬ್ಬ ಹೊಸ ನಿರ್ದೇಶಕನಿಂದ ಫಿಲ್ಮ್ ಮಾಡಿಸಿ ಅದಕ್ಕೆ ಎರಡೂವರೆ ಲಕ್ಷ ಬಂಡವಾಳ ಹಾಕಿದ್ದೀರಿ. ಅದು ಸೋತು ಹೋದರೆ ನೀವು ಅಂಗಡಿಯನ್ನೇ ಮಾರಬೇಕಾದೀತು. ನೀವು ಇಷ್ಟು ದೊಡ್ಡ ರಿಸ್ಕ್ ತೆಗೆದುಕೊಳ್ಳಬಾರದಿತ್ತು ಎಂದೆಲ್ಲ ಹಿತ ನುಡಿದಿದ್ದರು. (ಪುಟ - 131).

ಆದರೂ ಸುವರ್ಣರು ಹಿಡಿದ ದಾರಿಯಿಂದ ಮುಂದೆ ತಡೆದರು. ಅವರ ಭರವಸೆ ಸುಳ್ಳಾಗಲಿಲ್ಲ.

'ಗುಡ್ಡೆದ ಭೂತ' ಸದಾನಂದ ಸುವರ್ಣರ ಕೀರ್ತಿಯನ್ನು ಹೆಚ್ಚಿಸಿದ ಧಾರವಾಹಿ ಆರ್ಯಭಟ ಪ್ರಶಸ್ತಿ ಹಾಗೂ ಸಂದೇಶ ಪ್ರತಿಷ್ಠಾನದ ಪ್ರತಿಷ್ಠಿತ ಪ್ರಶಸ್ತಿಗಳನ್ನು ತಂದುಕೊಟ್ಟ ಧಾರವಾಹಿ ಇದು. ಸುವರ್ಣರ ಕಲಾತ್ಮಕ ದೃಷ್ಟಿಗೆ ರೂಪಕವಾಗಿರುವ ಈ ಧಾರವಾಹಿ ಕಾಲಾತೀತವಾಗಿ ಉಳಿದು ಬಾಳುವಂತಹದ್ದಾಗಿದೆ. ಸುವರ್ಣರು ಈ ಧಾರವಾಹಿಗಾಗಿ ಉಡುಪಿಯ ಕಲಾವಿದರಾದ ಪ್ರೊ. ಮಾಧವ ಆಚಾರ್ಯ ಉದ್ಯಾವರ, ರಾಮದಾಸ್, ಡಿ. ಜಿ. ಹೆಗ್ಡೆ ಮುಂತಾದವರನ್ನು ವಿವಿಧ ಪಾತ್ರಗಳಿಗಾಗಿ ಆಯ್ಕೆ ಮಾಡಿದರು. ಮುಖ್ಯ ಭೂಮಿಕೆಯಲ್ಲಿ ಪಾತ್ರವಹಿಸಿದ ಪ್ರಕಾಶ್ ರೈ ಆ ದಿನಗಳಲ್ಲಿ ಗುರುತಿಸಿಕೊಳ್ಳುವಂತಹ ಅಭಿನಯ ಅವಕಾಶಗಳಿಗೆ ಎದುರು ನೋಡುತ್ತಿದ್ದ ಓರ್ವ

ಪ್ರತಿಭಾವಂತ ರಂಗನಟರಾಗಿದ್ದರು. ಇಂದು ಅವರು ಪ್ರಖ್ಯಾತ ಚತುರ್ಭಾಷಾ ತಾರೆಯಾಗಿದ್ದಾರೆ. ಅವರ ಸಿನಿಮಾ ಜಗತ್ತಿನ ಮಿಂಚುವಿಕೆಗೆ ಒಂದರ್ಥದಲ್ಲಿ ಸುವರ್ಣರ ಗುಡ್ಡದ ಭೂತ ಧಾರವಾಹಿಯ ಮುಖ್ಯಸೇತುವಾಯಿತು ಎಂದು ಧಾರಾಳವಾಗಿ ಹೇಳಬಹುದಾಗಿದೆ (ಪುಟ - 163, 164).

ನಟ ವಾಮನ್‌ರಾಜ್ ಮುಂಬೈ ಕನ್ನಡ ಪ್ರತಿಭಾವಂತ ನಟ. ಅವರ ಬಗ್ಗೆ ಸುವರ್ಣ ಮೆಚ್ಚುಗೆ ನುಡಿಯನ್ನಾಡಿದ್ದಾರೆ. ಸುಮಾರು ಆರು ದಶಕಗಳಲ್ಲಿ ಮುಂಬಯಿ ರಂಗಭೂಮಿಯಲ್ಲಿ ಒಬ್ಬ ನಿರ್ದೇಶಕನಾಗಿ ಅನೇಕ ನಟರಿಗೆ ಅಭಿನಯದಲ್ಲಿ ಸಹಕರಿಸಿದ್ದೇನೆ. ಅಂಥವರಲ್ಲಿ ನಾನು ಮೆಚ್ಚಿದ್ದು ಪ್ರತಿಭಾವಂತರಾದ ಕೆಲವರನ್ನು ಮಾತ್ರ. ಆ ಕೆಲವರಲ್ಲಿ ವಾಮನ್ ಪ್ರಮುಖರೆನ್ನಲು ನನಗೆ ಅಭಿಮಾನವಾಗುತ್ತದೆ (ಪುಟ - 215).

ದೇವದಾಸ್ ಮೇಗರವಳ್ಳಿ, ಸದಾಶಿವ ಸಾಲ್ಯಾನ್, ರಾಮಚಂದ್ರ ರಾವ್, ಎನ್. ದಿನಕರ್ ರಾವ್, ಮುದ್ದು ಶೆಟ್ಟಿ, ದುಬೈ ಸರ್ವೋತ್ತಮ ಶೆಟ್ಟಿ, ಸುಶೀಲಾ ವಸಂತಲಕ್ಷ್ಮೀ, ಶ್ರೀಪತಿ ಬಲ್ಲಾಳ್, ಕಿಶೋರಿ ಬಲ್ಲಾಳ್, ವ್ಯಾಸರಾವ್ ನಿಂಜೂರ್, ಲತಾ ಬೊಕರ್, ಕೆ.ಜೆ. ರಾವ್, ಕುಂದಾರಾಣಿ, ಚಂದ್ರಹಾಸ್ ಉಳ್ಳಾಲ್, ಶಿಮುಂಜೆ ಪರಾರಿ, ಡಾ. ನರಸಿಂಹಮೂರ್ತಿ ಹೀಗೆ ಸುವರ್ಣರ ಜೊತೆ ರಂಗಕ್ಕಾಗಿ ದುಡಿದ ಅನೇಕ ಕಲಾವಿದರ ಉಲ್ಲೇಖ ಇಲ್ಲಿ ಬರುತ್ತದೆ.

ಸರಳ ಸೇವೆ ನಿರೂಪಣೆ, ಆಪ್ತವೆನಿಸಿಸುವ ವಿಶಿಷ್ಟ ಆಡಂಬರ ರಹಿತ ಶೈಲಿಯಲ್ಲಿ ಮೂಡಿ ಬಂದಿರುವ ಈ ಕೃತಿ ಕರಾವಳಿ ಮತ್ತು ಮುಂಬೈಯ ನಾಟಕರಂಗ ಮತ್ತು ಚಿತ್ರರಂಗದ ಸಾಂಸ್ಕತಿಕ ದಾಖಲೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಸದಾನಂದ ಸುವರ್ಣರು ಇನ್ನಷ್ಟು ಅರ್ಥಪೂರ್ಣ ನಾಟಕಗಳಿಗೆ ಜೀವ ನೀಡಲಿ, ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಡಿ.ಎನ್. ಉಪಾಧ್ಯರ ಮಾರ್ಗದರ್ಶನ ಇಂತಹ ಹತ್ತು ಹಲವು ಸಾಧಕರ ಸಾರ್ಥಕ ಬದುಕಿಗೆ ಬೆಳಕು ತೂರಲಿ, ಪತ್ರಕರ್ತೆ ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ ಅವರ ಸಮರ್ಥ ಲೇಖನಿಯಿಂದ ಇಂತಹ ತೂಕದ ಕೃತಿಗಳು ಇನ್ನಷ್ಟು ಬೆಳಕು ಕಾಣಲೆಂದು ಆಶಿಸುತ್ತೇನೆ. ●

---

## ಪರಿಪಾಠ

ಕೆರೆದಂಡೆಯ ಗಿಡಮರದ ಹೊದರಿಂದಲಿ
ವಾಲಿತ್ತು ಸಣಕಲು ಗಿಡ ನೀರಮೇಲಿನಲಿ
ಇದೆಯೇ ವೀಕ್ಷಿಸುವ ಸೊಬಗು ನೀರ್ಗನ್ನಡಿಯಲಿ
ಬಾನೆತ್ತರಕ್ಕೇಳುವಾಸೆ ಪಡೆಯೆ ರವಿರಶ್ಮಿಗಳ ಸುಖದಲಿ
    ಹದ್ದೊಂದು ಬಾನೆತ್ತರದಲಿ ಗಿರಕಿ ಹೊಡೆಯುವದು
    ಅದಕಿದೆಯೇ ಬಿಸಿಲ್ಗಾಯಿಸುವ ಚಿಂತೆ ರೆಕ್ಕೆಯಲಿ
    ಮಿಟುಕಿಸದೇ ಕಣ್ಣೆವೆಗಳ ದೃಷ್ಟಿ ನೆಲ ಜಾಲಾಡಿಸುವದು
    ಎರಗಲು ಬಿಲದಿಂದ ಹೊರಬಿದ್ದ ಸರಿಸೃಪಗಳು ಬೇಗುದಿಯಲಿ
ತಿಳಿನೀಲ ನೀರಿನಡಿ ಕುಣಿಯುವ ಬಣ್ಣದ ಮೀನು
ಕಾಣುವೆವು ಒಂದರಗಳಿಗೆ ನೀರಮೇಲೆ ಜಿಗಿವುದನು
ಅದಕಿದೆಯೇ ಕೋರೈಸುವ ಬಿಸಿಲು ನೋಡುವ ಹಂಬಲ
ಒಂದಿಷ್ಟು ನಿರ್ಮಲ ಗಾಳಿ ಸೇವಿಸುವುದಷ್ಟೇ ಚಪಲ
    ನದಿ ದಂಡೆಯ ಕರಿಬಂಡಿಯ ಮೇಲೆ ವಿರಮಿಸಿಬಿಟ್ಟು
    ಮೇಲ್ಕೆಳಗಾಡಿಸುವದು ಗಾಳವನು ಆಮಿಷವನಿಟ್ಟು
    ತಿನಿಸು ನೀಡಲು ಬಂದಿಹನೇ ಹಸಿದ ಮೀನುಗಳಿಗಿವನು
    ತನ್ನವರ ಹಸಿವು ಕೊನೆಗೊಳಿಸುವ ಚಿಂತೆಯಲಿ ಮುಳುಗಿಹನು
ರಭಸದಿಂದಲಿ ಜಿಗಿಯುವದು ನದಿನೀರು ತಡಸಲಾಗಿ
ತೀರಿಸುವದೇ ಚಪಲ ರೇಗಿಸಿ ಕಲ್ಲುಬಂಡೆಗಳಲಿ ಸಾಗಿ
ಅದಕಿದೆ ತ್ವರಿತದಲಿ ಸೇರುವ ಕಡಲತೀರದ ತಾಣ
ಮಿತಿಮೀರದೆ ದಂಡೆಯಣತಿಯಲಿರೆ ಸಫಲವವುದದರ ಜೀವನ

*- ನಾಗೇಶ ಚಿತ್ತಾಲ*

## ಕನ್ನಡಿ

ಅಂತಿಂತ ಕನ್ನಡಿಯಲ್ಲ... ರಾಮಬಾಣ... ಭೀಮಗದೆಗೆ ಸಮಾನ
ಸಿದ್ಧಗೊಂಡಿದೆ ಈಗ ಸಿದ್ಧಹಸ್ತದ ಮಹಾನ್ ಸಿದ್ಧಾಂತಿಗಳ ಸ್ವಪ್ನ ಸಾಕಾರ...!

ಕನ್ನಹಾಕುವವರ ಕೆನ್ನೆಗೆ ಬಾರಿಸದೇ ಬಣ್ಣ ಬಯಲು ಮಾಡುವ
ಮನ್ನಣೆಯ ಮಣೆಗಾಗಿ ಮಾನಬಿಟ್ಟು ಹೋರಾಡುವವರ ಮದ ಇಳಿಸುವ
ಸಮಾಜ ಸೇವಾ ಮುಖವಾಡ ಹೊತ್ತವರ ಮುಖಭಂಗ ಮಾಡಿಸುವ
ಮತಾಂಧ ರಾಜಕಾರಣಿಗಳ ಸದೆಬಡಿಯುವ ಸಾಮರ್ಥ್ಯದ ಕನ್ನಡಿ..|

ಪೊಳ್ಳು ಆಶ್ವಾಸನೆ ನೀಡುವ ರಾಜಕಾರಣಿಗಳ ಅಸಲಿ ಮುಖಗಳು
ತಂದೂರಿ ಭಟ್ಟಿಯಲಿ ಕರಕಲಾದ ಕನ್ಯೆಯರ ಅರೆಬೆಂದ ಶವಗಳು
ಮದೋನ್ಮತ್ತರ ಮದದೆದುರು ಕಣ್ಮರೆಯಾಗುವ ಅದೆಷ್ಟೋ ಬನ್ವರಿ ದೇವಿಗಳು
ಕನ್ನಡಿಯೆದರು ಎಲ್ಲವೂ ಸ್ಪಷ್ಟ.. ಹುಡುಕಬಹುದು ಸಮಸ್ಯೆಗೆ ಪರಿಹಾರ..|

ಸತ್ತ ಸೂತಕ ಮುಗಿಯುವ ಮೊದಲೇ ಆಸ್ತಿಕಬಳಿಸುವ ಸ್ವಹಿತ ಚಿಂತಕರ
ಬದುಕಿದ್ದೂ ಸತ್ತ ದಾಖಲೆ ಮಾಡಿ ಮುಕ್ತಿ ಪಥ ತೋರಿಸುವ ಉದಾರಿಗಳ
ಖೋಟಾ ಸ್ಟ್ಯಾಂಪ್ ಪೇಪರಿನ ರಾಶಿಯಲಿ ಅಡಗಿರುವ ಗೋಮುಖ ವ್ಯಾಘ್ರಗಳ
ಸ್ವಿಸ್ ಬ್ಯಾಂಕಿನ ಅಸಲಿ ನೋಟಿನ ಅಸಲಿ ಮಾಲಿಕರ ಹೆಸರು ಕ್ಷಣದಿ ಜಗಜ್ಜಾರಿರಾತು..|

ಕುರ್ಚಿಗಾಗಿ ಒದ್ದಾಡಿ ಗುದ್ದಾಡುವ ಮಂತ್ರಿ-ಸಂತ್ರಿಗಳ ಒಳಜಗಳದ ಗುಟ್ಟು
ಸತ್ಯವನೆಂದೂ ಆಡದ ದೇಶ ಆಳುವ ಖಳನಾಯಕರ ಕರಾಳ ತಂಟೆ
ನೆಲಬಗೆದು ಕಬಳಿಸುವ ಗಣಿದೊರೆಗಳ ಸಂಪತ್ತಿನ ತೀಟೆ ?
ಬೊಕ್ಕಸ ಕೊಳ್ಳೆಹೊಡೆಯುವ ವಿಕ್ರಾಂತರಿಗೆಲ್ಲ ಕಡಿವಾಣ ಹಾಕುವ ಕನ್ನಡಿ..|

ಆಳುವ ಪ್ರಭುಗಳೇ.. ನೀವು ನಿಸ್ವಾರ್ಥಿಗಳಾಗಿದ್ದರೆ ಒಮ್ಮೆ ಪೇಟೆಂಟ್ ಕೊಡಿಸಿ
ಸಂವಿಧಾನ ರಕ್ಷಕರೇ... ನನ್ನ ಕನ್ನಡಿಯ ರಕ್ಷಿಸಿ.. ಭಕ್ಷಕರಾಗದಿರಿ
ಜನಪರ ಹೋರಾಟದ ವಿಜಯ ಪತಾಕೆಯನ್ನೇರಿಸುವ ಕನ್ನಡಿ
ಇದು ಜನ ಲೋಕ ಪಾಲನೆಂಬ ಹರಿತ ತ್ವರಿತ ಕ್ರಾಂತಿಕಾರಿ ಕನ್ನಡಿ...|

ಗಾಂಧಿ ನಾಡಲ್ಲಿ ನನ್ನ ಕನ್ನಡಿಯ ರಕ್ಷಕರು ಅಳಿದು ಹೋದರೇ?
ಕನ್ನ ಇಕ್ಕುವ ದೊರೆಗಳೆ ನ್ನನ ಕನ್ನಡಿಗೆ ಹೊಡೆದರು ಕಲ್ಲು ಅದೆಷ್ಟು ಬಾರಿ
ಗುಲ್ಲು ಗದ್ದಲದೊಂದಿಗೆ ಗಲ್ಲು ಶಿಕ್ಷೆಯಾಯ್ತೋ ಜನಲೋಕಪಾಲ್ ಬಿಲ್ಲಿಗೆ
ವೈದಿಸ್ ಕೊಲವರಿ ದಿ..| ಯಂತೆ ಧ್ವನಿಯಾಕಾಗಲಿಲ್ಲ ಬ್ರೇಕಿಂಗ್ ನಿವ್ಸ್?

**– ಶಿಮಂತೂರು ಚಂದ್ರಹಾಸ ಸುವರ್ಣ**


## MATRIMONIAL

Wanted Kannada Brahmin for Kannada Smartha Girl Age: 20 yrs Doing M.S. in Boston University. Height 5'3" very fair slim good looking. Parents Both Doctors. Settled in Bangalore. Gotra – Haritasa, Shatabisha Nakshatra, Kumbha Raashi. Contact: Sudha Rao: 9821235511 / 9821267372 Email: ***sudhashrikant@gmail.com***

# ರಕ್ತದಾನ ಏಕೆ ? ಹೇಗೆ ?

ಒಬ್ಬ ವ್ಯಕ್ತಿ ಸ್ವ ಇಚ್ಛೆಯಿಂದ ರಕ್ತ ನೀಡಲು ಬಂದಾಗ "ರಕ್ತದಾನ" ಪ್ರಕ್ರಿಯೆ ನಡೆಯುವುದು. ಅಂತಹ ರಕ್ತವನ್ನು ರಕ್ತ ವರ್ಗಾವಣೆಗಳಿಗೆ ಬಳಸಲಾಗುತ್ತದೆ. ಅಥವಾ ವಿಭಾಗೀಕರಣ ಎನ್ನುವ ಪ್ರಕ್ರಿಯೆಯ ಮೂಲಕ ಔಷಧಿ ತಯಾರಿಕೆಗಾಗಿ ಬಳಸಲಾಗುತ್ತದೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬಹುತೇಕ ರಕ್ತದಾನಿಗಳು ಹಣವನ್ನು ತೆಗೆದುಕೊಳ್ಳದೆ ಸ್ವ ಇಚ್ಛೆಯಿಂದ ಸಮೂಹ ಪೂರೈಕೆಗೆಂದು ರಕ್ತದಾನ ಮಾಡುತ್ತಾರೆ. ಬಡರಾಷ್ಟ್ರಗಳಲ್ಲಿ ವ್ಯವಸ್ಥಿತ ರಕ್ತ ಪೂರೈಕೆಯೂ ಬಹಳ ಕಡಿಮೆ ಮತ್ತು ರಕ್ತದಾನಿಗಳು ತಮ್ಮ ಕುಟುಂಬದವರಿಗೆ ಅಥವಾ ಸ್ನೇಹಿತರಿಗೆ ರಕ್ತ ವರ್ಗಾವಣೆಯ ಅಗತ್ಯ ಇದ್ದಾಗ ಮಾತ್ರ ರಕ್ತದಾನ ಮಾಡುತ್ತಾರೆ. ರಕ್ತದಾನ ಮಾಡುವುದು ಸುರಕ್ಷಿತವಾದರೂ ಸೂಜಿ ಚುಚ್ಚುವಾಗ ಅಥವಾ ಆಯಾಸವಾದಾಗ ಕೆಲವರಿಗೆ ನೋವಾಗುವ ಅನುಭವವಾಗಬಹುದು.

ರಕ್ತದಾನಿಗಳು ತಮ್ಮ ರಕ್ತವು ದಾನಮಾಡಲು ಅರ್ಹವಾಗದಿರಬಹುದಾದ ಸಾಧ್ಯತೆ ಇದೆಯೇ ಎಂಬ ಪರೀಕ್ಷೆಗೊಳಪಡುತ್ತಾರೆ. ಈ ಪರೀಕ್ಷೆಗಳಲ್ಲಿ ರಕ್ತವರ್ಗಾವಣೆಯಿಂದ ಹರಡಬಹುದಾದ HIV ಮತ್ತು ಹೆಪಟೈಟಿಸ್‌ನಂತಹಾ ರೋಗಗಳ ಸಾಧ್ಯತೆಯ ಪರೀಕ್ಷೆಯೂ ಇರುತ್ತದೆ. ರಕ್ತದಾನ ಸಂದರ್ಭದಲ್ಲಿ ದಾನಿಗಳಲ್ಲಿ ಅವರ ಆರೋಗ್ಯ ಇತಿಹಾಸದ ಬಗ್ಗೆ ವಿಚಾರಣೆ ಆಗುವುದು ಮತ್ತು ರಕ್ತ ಕೊಡಲು ಆಕೆ ಅಥವಾ ಆತ ಆರೋಗ್ಯವಂತ ಹಾಗೂ ರಕ್ತದಾನದಿಂದ ಅವರಿಗೆ ತೊಂದರೆಯಾಗುವುದೋ ಇಲ್ಲವೋ ಎಂಬುದನ್ನು ತಿಳಿಯಲು ಅವರ ದೈಹಿಕ ಪರೀಕ್ಷೆ ನಡೆಸಲಾಗುವುದು. ಆತ ಅಥವಾ ಆಕೆ ಏನನ್ನು ದಾನ ಮಾಡುತ್ತಾರೆ ಎಂಬುದರ ಮೇಲೆ ಮತ್ತು ದಾನ ನಡೆಯುವ ದೇಶದ ನೀತಿ ನಿಯಾಮಾವಳಿಗಳ ಮೇಲೆ ದಾನಗಳ ನಡುವಿನ ಅವಧಿಯು ತಿಂಗಳುಗಳು ಮತ್ತು ದಿನಗಳ ಮಟ್ಟಿಗೆ ವ್ಯತ್ಯಾಸವಾಗಬಹುದು. ಉದಾಹರಣೆಗೆ ಯುನೈಟೆಡ್ ಸ್ಟೇಟ್ಸ್‌ನಲ್ಲಿ ದಾನಿಯು ಒಂದು ಬಾರಿ ರಕ್ತದಾನ ಮಾಡಿದರೆ ಎಂಟು ವಾರಗಳ ನಂತರ ಮತ್ತೊಮ್ಮೆ ಸಂಪೂರ್ಣ ರಕ್ತದಾನ ಮಾಡಲು ಅರ್ಹ. ಆದರೆ ಭಾರತದಲ್ಲಿ ಮರು ರಕ್ತದಾನಕ್ಕೆ 3 ತಿಂಗಳ ಅವಧಿಯನ್ನು ನಿಗಧಿ ಪಡಿಸಲಾಗಿದೆ. ರೋಗಿಯು ಪಡೆದುಕೊಳ್ಳುವ ರಕ್ತದ ಪ್ರಮಾಣ ಹಾಗೂ ವಿಧಾನಗಳು ಬದಲಾವಣೆಗಳಾಗಬಹುದು. ಆದರೆ ಒಬ್ಬ ವ್ಯಕ್ತಿ 450 ಮಿಲಿ ಲೀಟರ್‌ಗಳಷ್ಟು ಸಂಪೂರ್ಣ ರಕ್ತವನ್ನು ತಮ್ಮ ರಕ್ತದಿಂದ ನೀಡಬಹುದು. ರಕ್ತ ಸಂಗ್ರಹಣೆಯನ್ನು ಸಾಮಾನ್ಯ ರೂಢಿಯಂತೆ ಅಥವಾ ಸ್ವಯಂ ಚಾಲಿತ ರಕ್ತ ಸಂಗ್ರಹಣ ಯಂತ್ರದಿಂದಲೂ ರಕ್ತದ ನಿಗದಿತ ಭಾಗಗಳನ್ನು ಮಾತ್ರ ಸಂಗ್ರಹಿಸಬಹುದು. ರಕ್ತವರ್ಗಾವಣೆ ನಡೆಸಲು ಬಳಸಲಾಗುವ ರಕ್ತದ ಬಹುತೇಕ ಘಟಕಗಳ ಶೇಖರಣಾ ಅವಧಿ ಅತಿ ಕಡಿಮೆ. ಅವುಗಳ ನಿರಂತರ ಪೂರೈಕೆಯನ್ನು ಮಾಡುವುದು ಚಿರಸ್ಥಾಯಿ ಸಮಸ್ಯೆಯಾಗಿದೆ.

ಸಂಗ್ರಹಿಸಿದ ರಕ್ತವನ್ನು ಯಾರು ಪಡೆಯುತ್ತಾರೆ ಎಂಬುದರ ಆಧಾರದ ಮೇರೆಗೆ ರಕ್ತದಾನಗಳನ್ನು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಅಲೋಜೆನಿಕ್ (ಸದೃಶ) ರಕ್ತದಾನ ಎಂದರೆ ಒಬ್ಬ ದಾನಿಯು ರಕ್ತವನ್ನು ರಕ್ತಸಂರಕ್ಷಣಾ ಕೇಂದ್ರಕ್ಕೆ ನೀಡುವುದು ಮತ್ತು ಆ ರಕ್ತವನ್ನು ಅಪರಿಚಿತರಿಗೆ ರಕ್ತವರ್ಗಾವಣೆ ಮಾಡಲು ಬಳಸುವುದು ನಿರ್ದೇಶಿತ ರಕ್ತದಾನ ಎಂದರೆ ಒಬ್ಬ ವ್ಯಕ್ತಿಯು ತನ್ನ ಕುಟುಂಬದ ಇನ್ನೊಬ್ಬ ವ್ಯಕ್ತಿಗೆ ರಕ್ತ ವರ್ಗಾವಣೆ ಮಾಡುವುದಕ್ಕೆಂದು ದಾನ ಮಾಡುವುದು. ನಿರ್ದೇಶಿತ ರಕ್ತದಾನಗಳು ತುಲನಾತ್ಮಕವಾಗಿ ಕಡಿಮೆ.

ರಕ್ತದಾನ ಪ್ರಕ್ತಿಯೆಯು ಆಯಾ ರಾಷ್ಟ್ರದ ನಿಯಮದ ಪ್ರಕಾರ ವ್ಯತ್ಯಾಸಗೊಳ್ಳುತ್ತದೆ ಹಾಗೂ ದಾನಿಗಳು ಪಾಲಿಸಬೇಕಾದ ಶಿಫಾರಸ್ಸುಗಳು ರಕ್ತಸಂಗ್ರಹಣ ಘಟಕಗಳ ಅವಶ್ಯಕತೆಯಂತೆ ಬದಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯು ರಕ್ತದಾನದ ಬಗ್ಗೆ ನಿಯಮಾವಳಿಗಳನ್ನು ರೂಪಿಸಲು ಶಿಫಾರಸುಗಳನ್ನು ಮಾಡಿದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಇವುಗಳಲ್ಲಿ ಹಲವನ್ನು ಪಾಲಿಸಲಾಗುತ್ತಿಲ್ಲ. ಉದಾಹರಣೆಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶಿಫಾರಸು ಮಾಡಲಾದ ರಕ್ತ ತಪಾಸಣೆಗೆ ಬೇಕಾದ ಅಗತ್ಯವಿರುವ ಪ್ರಯೋಗಾಲಯ ಸೌಲಭ್ಯಗಳು, ತರಬೇತಿ ಹೊಂದಿದ ಸಿಬ್ಬಂದಿ ಹಾಗೂ ವಿಶೇಷಕಾರಗಳು ಬಹಳಷ್ಟು ಲಭ್ಯವೇ ಇರುವುದಿಲ್ಲ ಅಥವಾ ದುಬಾರಿಯಾಗಿರುತ್ತದೆ.



✍ ಶಾರಾದಾ ಎ. ಅಂಚನ್

ದಾನಿಗಳು ಬಂದು ರಕ್ತದಾನ ಮಾಡುವ ಶಿಬಿರಗಳನ್ನು ರಕ್ತದಾನದ ಕೂಟ ಅಥವಾ ರಕ್ತದಾನದ ಮೇಳ ಎಂದು ಕರೆಯಲಾಗುತ್ತದೆ. ಇವುಗಳು ರಕ್ತಸಂಗ್ರಹಣಾ ಕೇಂದ್ರದಲ್ಲಿ ನಡೆಯಬಹುದಾದರೂ, ಸಾಧಾರಣವಾಗಿ ಸಾಮಾಗ್ರಿಗಳ ವಾರಾಟ ಮಳಿಗೆಯಲ್ಲಿ ಕಛೇರಿಗಳಲ್ಲಿ ಶಾಲೆಗಳಲ್ಲಿ ಅಥವಾ ದೇವಾಲಯಗಳಲ್ಲಿ ನಡೆಸಲಾಗುತ್ತದೆ.

### ರೋಗ ತಪಾಸಣೆ :

ಸಾಧಾರಣವಾಗಿ ದಾನಿಗಳು ಈ ಪ್ರಕ್ರಿಯೆ ನಡೆಸಲು ಒಪ್ಪಿಗೆ ಸೂಚಿಸಬೇಕಾಗುತ್ತದೆ. ಇದರಿಂದಾಗಿ ಅಪ್ರಾಪ್ತರು ಪೋಷಕರ ಅನುಮತಿಯಿಲ್ಲದೆ ದಾನ ಮಾಡುವಂತಿಲ್ಲ. ಕೆಲವು ರಾಷ್ಟ್ರಗಳಲ್ಲಿ ರಕ್ತದಾನಿಯ ಮಾಹಿತಿಯನ್ನು ಅನಾಮಿಕತ್ವ ಸೂಚಿಸಲು ಹೆಸರಿನ ಬದಲಿಗೆ ದಾನಿಯ ರಕ್ತದೊಂದಿಗೆ ಪರಿಗಣಿಸಲಾಗುತ್ತದೆ. ಆದರೆ ಯುನೈಟೆಡ್ ಸ್ಟೇಟ್ಸ್‌ನಂತಹಾ ಇತರ ರಾಷ್ಟ್ರಗಳಲ್ಲಿ ರಕ್ತದಾನಿಗಳ ಹೆಸರನ್ನು ನಮೂದಿಸಿ ಅನರ್ಹ ದಾನಿಗಳನ್ನು ಪಟ್ಟಿ ಮಾಡಲಾಗುತ್ತದೆ. ಸಂಭಾವ್ಯ ದಾನಿಯು ಈ ನಿಯಮಗಳನ್ನು ಪಾಲಿಸದಿದ್ದಲ್ಲಿ ಅವರ ದಾನವನ್ನು ಮುಂದೂಡಲಾಗುತ್ತದೆ. ಈ ಪರಿಭಾಷೆಯನ್ನು ಏಕೆ ಬಳಸುತ್ತಾರೆಂದರೆ ಅನರ್ಹರಾಗಿರುವ ದಾನಿಗಳಲ್ಲಿ ಕೆಲವರು ಕೆಲಕಾಲದ ನಂತರ ಅರ್ಹತೆ ಹೊಂದಬಹುದು. ದಾನಿಯ ವಂಶ ಅಥವಾ ಜನಾಂಗೀಯ ಮೂಲವು ಕೆಲವೊಮ್ಮೆ ಮುಖ್ಯವಾಗುತ್ತದೆ. ಏಕೆಂದರೆ ಕೆಲ ರಕ್ತದ ವಿಧಗಳು ವಿಶೇಷವಾಗಿ ಅಪರೂಪದ ನಿರ್ದಿಷ್ಟ ಜನಾಂಗಗಳಲ್ಲಿ ಸಾಧಾರಣವಾಗಿ ಲಭ್ಯವಿರುತ್ತದೆ. ಐತಿಹಾಸಿಕವಾಗಿ ದಾನಿಗಳನ್ನು ವಂಶ ಧರ್ಮ ಅಥವಾ ಜನಾಂಗದ ಮೇಲೆ ಆಧಾರಿತವಾಗಿ ವಿಂಗಡಣೆ ಅಥವಾ ಬೇರ್ಪಡಿಕೆಗಳು ನಡೆಯುತ್ತಿದ್ದವಾದರೂ ಪ್ರಸ್ತುತ ಈ ವ್ಯವಸ್ಥೆ ಬಳಕೆಯಲ್ಲಿಲ್ಲ.

### ರಕ್ತ ಪಡೆಯುವವರ ಸುರಕ್ಷತೆ :

ರಕ್ತಗ್ರಾಹಕರಿಗೆ ದಾನವು ಅಸುರಕ್ಷಿತವಾಗಬಾರದೆಂದು ದಾನಿಗಳನ್ನು ಅನೇಕ ರೀತಿಯ ಆರೋಗ್ಯ ತಪಾಸಣೆಗೆ ಒಳ ಪಡಿಸಲಾಗುತ್ತದೆ. ಈ ನಿರ್ಭಂಧಗಳಲ್ಲಿ HIV ರೋಗದ ಅಪಾಯದಿಂದ ದೂರವಿರಲು ಸಲಿಂಗಗಾಮಿ ಪುರುಷರನ್ನು ರಕ್ತದಾನ ಮಾಡದಂತೆ ತಡೆಯಲಾಗುತ್ತಿರುವುದು ವಿವಾದಾತ್ಮಕವಾಗಿದೆ. HIV, ಮಲೇರಿಯಾ, ವೆನೇರಿಯಲ್ ಡಿಸೀಸ್ ಹಾಗೂ ಹೆಪಟೈಟಿಸ್ (Hepatitit) ನಂತಹಾ ರಕ್ತ ವರ್ಗಾವಣೆಯಿಂದ ಹರಡಬಹುದಾದ ರೋಗಗಳ ಚಿಹ್ನೆಗಳು ಹಾಗೂ ಲಕ್ಷಣಗಳನ್ನು ದಾನಿಗಳು ಹೊಂದಿದ್ದಾರೆಯೇ ಎಂದು ಪರೀಕ್ಷಿಸಲಾಗುತ್ತದೆ.

### ದಾನಿಗಳ ಸುರಕ್ಷತೆ :

ರಕ್ತದಾನಿಗಳನ್ನು ತಪಾಸಣೆ ಮಾಡಲಾಗುವುದಲ್ಲದೇ ರಕ್ತದಾನ ಮಾಡುವಾಗ ಇದರಿಂದ ನಿಮ್ಮ ಆರೋಗ್ಯಕ್ಕೆ ಅಪಾಯ ಇದೆಯೇ ಎಂದು ಅವರ ಆರೋಗ್ಯ ಇತಿಹಾಸದ ಬಗ್ಗೆ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳಲಾಗುತ್ತದೆ. ದಾನಿಯು ಹಿಮೋಗ್ಲೋಬಿನ್ ಮಟ್ಟವನ್ನು ಪರೀಕ್ಷಿಸಿ ರಕ್ತದಾನ ಮಾಡುವುದರಿಂದ ಅವರು ರಕ್ತ ಹೀನರಾಗುವ ಸಾಧ್ಯತೆ ಇದೆಯೇ ಎಂದು ಪತ್ತೆ ಹಚ್ಚಲಾಗುತ್ತದೆ. ಇದರಿಂದ ರೋಗಿಯು ರಕ್ತ ನೀಡಲು ಅರ್ಹನೋ ಇಲ್ಲವೋ ಎಂಬುದು ತಿಳಿಯುತ್ತದೆ. ಈ ಪರೀಕ್ಷೆಯ ಫಲಿತಾಂಶವೇ ಬಹು ಸಾಮಾನ್ಯವಾಗಿ ದಾನಿಗಳನ್ನು ಅನರ್ಹರನ್ನಾಗಿಸುತ್ತದೆ. ನಾಡಿ ಮಿಡಿತ, ರಕ್ತದೊತ್ತಡ ಹಾಗೂ ದೇಹದ ಉಷ್ಣತೆಗಳನ್ನು ಕೂಡಾ ತಪಾಸಿಸಲಾಗುತ್ತದೆ. ಹಿರಿಯ ದಾನಿಗಳನ್ನು ಆರೋಗ್ಯದ ಹಿತದೃಷ್ಟಿಯಿಂದ ಕೇವಲ ವಯಸ್ಸಿನ ಆಧಾರದ ಮೇಲೆಯೇ ಅನರ್ಹಗೊಳಿಸಲಾಗುತ್ತದೆ. ಗರ್ಭಿಣಿಯರು ರಕ್ತದಾನ ಮಾಡುವುದರ ಸುರಕ್ಷತೆ ಬಗೆಗೆ ವಿಸ್ತೃತ ಅಧ್ಯಯನ ನಡೆದಿಲ್ಲವಾದರೂ

ಸಾಮಾನ್ಯವಾಗಿ ಅವರ ರಕ್ತದಾನವನ್ನು ಮುಂದೂಡಲಾಗುತ್ತದೆ.

**ರಕ್ತ ತಪಾಸಣೆ :**

ರಕ್ತ ವರ್ಗಾವಣೆಗೆ ಬಳಸುವುದಾದರೆ ದಾನಿಯ ರಕ್ತದ ವಿಧವನ್ನು ಕಡ್ಡಾಯವಾಗಿ ನಿರ್ಧರಿಸಬೇಕಾಗುತ್ತದೆ. ಸಂಗ್ರಹಣಾ ಸಂಸ್ಥೆಯು (Blood Bank) ಸಾಧಾರಣವಾಗಿ ರಕ್ತವನ್ನು A, B, AB ಹಾಗೂ O ವಿಧಗಳಾಗಿ ಹಾಗೂ ದಾನಿಯು Rh (D) ಪಾಸಿಟಿವ್ ಹಾಗೂ ನೆಗೆಟಿವ್ ವಿಧಗಳನ್ನು ನಿರ್ಧರಿಸುತ್ತದಲ್ಲದೇ ಸಾಮಾನ್ಯವಲ್ಲದ ಪ್ರತಿಕಾರಕಗಳಿಗೆ ಪ್ರತಿಕಾಯಗಳಾಗಿ (Antigen - Antibody Reaction) ಪರಿಣಮಿಸಬಲ್ಲ ಸಾಧ್ಯತೆಯನ್ನು ತಪಾಸಿಸಲಾಗುತ್ತದೆ. ಪ್ರತಿ ಹೊಂದಾಣಿಕೆಯೂ ಸೇರಿದಂತೆ ಅನೇಕ ತಪಾಸಣೆಗಳನ್ನು ರಕ್ತ ವರ್ಗಾವಣೆಯ ಸಂದರ್ಭದಲ್ಲಿ ಮಾಡಲಾಗುತ್ತದೆ. 'O' ಗುಂಪನ್ನು ಸಾಧಾರಣವಾಗಿ 'ಸಾರ್ವತ್ರಿಕ ದಾನಿ' (Universal Donor) ಎಂದು ಪರಿಗಣಿಸುವರಾದರೂ ಇದು ಕೇವಲ ಕೆಂಪುಕೋಶ (PCV) ವರ್ಗಾವಣೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಪ್ಲಾಸ್ಮಾ ವರ್ಗಾವಣೆಗಳಲ್ಲಿ ಇದರ ವಿರುದ್ಧವಾಗಿ ಗುಂಪನ್ನು ಸಾರ್ವತ್ರಿಕ ದಾನಿ ಗುಂಪಾಗಿ ಪರಿಗಣಿಸಲಾಗುತ್ತದೆ. ಬಹಳಷ್ಟು ಬಾರಿ ಕೆಲ STD ಗಳೂ (Sexually transmitted diseases) ಸೇರಿದಂತೆ ರಕ್ತವನ್ನು ಅನೇಕ ರೋಗಗಳ ಸಾಧ್ಯತೆಗೆ ತಪಾಸಿಸಲಾಗುತ್ತದೆ. ಈ ತಪಾಸಣೆಗಳು ಅತಿ ಸೂಕ್ಷ್ಮ ಶೋಧನೆಗಳಾಗಿದ್ದು ಪ್ರತ್ಯಕ್ಷ ರೋಗ ವಿಧಾನವನ್ನು ಮಾಡಲಾಗುವುದಿಲ್ಲ. ಕೆಲ ತಪಾಸಣಾ ಫಲಿತಾಂಶಗಳು ಹೆಚ್ಚು ನಿರ್ದಿಷ್ಟ ತಪಾಸಣೆಗಳ ನಂತರ ಮಿಥ್ಯ ಪತ್ತೆಗಳಾಗಿ ಪರಿಣಮಿಸುತ್ತದೆ. ಮಿಥ್ಯಾ ನಿರಾಕರಣೆಗಳು ಅಪರೂಪವಾದರೂ ಮಿಥ್ಯಾ ನಿರಾಕರಣೆಯು ಕಲುಷಿತ ಘಟಕವನ್ನು ಸೂಚಿಸುವುದರಿಂದ ಅನಾಮಿಕ STD ತಪಾಸಣೆಯ ಉದ್ದೇಶಕ್ಕಾಗಿ ದಾನಿಗಳಿಗೆ ರಕ್ತದಾನ ಮಾಡದಿರುವಂತೆ ಸಲಹೆ ನೀಡಲಾಗುತ್ತದೆ. ಈ ತಪಾಸಣೆಗಳ ಫಲಿತಾಂಶವು ಧನಾತ್ಮಕವಾದರೆ ರಕ್ತವನ್ನು ಸ್ವಯಂ ಪೂರಣ ದಾನಗಳಂತಹ ಸಂದರ್ಭಗಳನ್ನು ಬಿಟ್ಟರೆ ಉಳಿದಂತೆ ನಿರಾಕರಿಸಲಾಗುತ್ತದೆ. ಸಾಮಾನ್ಯವಾಗಿ ದಾನಿಗೆ ತಪಾಸಣೆಯ ಫಲಿತಾಂಶವನ್ನು ತಿಳಿಸಲಾಗುತ್ತದೆ.

ದಾನ ಮಾಡಿದ ರಕ್ತವನ್ನು ಅನೇಕ ವಿಧಾನಗಳ ಮೂಲಕ ತಪಾಸಿಸಲಾಗುತ್ತದಾದರೂ ವಿಶ್ವ ಆರೋಗ್ಯ ಸಂಸ್ಥೆಯು ಶಿಫಾರಸು ಮಾಡಿರುವ ಪ್ರಮುಖ ತಪಾಸಣೆಗಳು ಕೆಳಗಿನ ನಾಲ್ಕು ಪರೀಕ್ಷೆಗಳಾಗಿವೆ.

1. Hepatitis B. Antigen (HBsAg)
2. Hepatitis C Virus (HCV)
3. HIV (Human Immunodifficiency Virus)
4. VDRL (Venerial Disease Research Laboratory)

2006ರಲ್ಲಿ Who (World Health Organization) ನೀಡಿದ ವರದಿಯ ಪ್ರಕಾರ ಸಮೀಕ್ಷೆ ನಡೆಸಿದ ಒಟ್ಟು 124ರಲ್ಲಿ 56 ರಾಷ್ಟ್ರಗಳು ಎಲ್ಲಾ ರಕ್ತದಾನಗಳಿಗೆ ಮೂಲಭೂತ ಪರೀಕ್ಷೆಗಳನ್ನು ಮಾಡಿಸುತ್ತಿಲ್ಲ. ಸ್ಥಳೀಯ ಅಗತ್ಯಗಳ ಮೇರೆಗೆ ವರ್ಗಾವಣೆಯಿಂದ ಹರಡಬಹುದಾದ ಸಾಂಕ್ರಾಮಿಕಗಳ ಇತರ ತಪಾಸಣೆಗಳನ್ನು ನಡೆಸಲಾಗುತ್ತದೆ. ಹೆಚ್ಚುವರಿ ತಪಾಸಣೆಗಳು ದುಬಾರಿಯಾಗಿವೆ. ಕೆಲಸಂದರ್ಭಗಳಲ್ಲಿ ವೆಚ್ಚದ ಕಾರಣಕ್ಕಾಗಿಯೇ ತಪಾಸಣೆಗಳನ್ನು ಮಾಡಲಾಗುವುದಿಲ್ಲ. ಕೆಲವೊಮ್ಮೆ ಒಂದೇ ರೋಗದ ಪತ್ತೆಗೆ ಹಲವು ತಪಾಸಣೆಗಳನ್ನು ಮಾಡಿ ಅವುಗಳಲ್ಲಿನ ಕೊರತೆಗಳನ್ನು ನೀಡಲಾಗುತ್ತದೆ. ಉದಾಹರಣೆಗೆ HIV ಪ್ರತಿಕಾಯ ತಪಾಸಣೆಯು ದಾನಿಯ ಇತ್ತೀಚಿನ ಸೋಂಕುಗಳನ್ನು ಪತ್ತೆ ಹಚ್ಚುವುದಿಲ್ಲ. ಆದ್ದರಿಂದ ಕೆಲವು ರಕ್ತ ಬ್ಯಾಂಕ್‌ಗಳು P24 ಪ್ರತಿಕಾರದ ಅಥವಾ HIV ನ್ಯೂಕ್ಲಿಕ್ ಆ್ಯಸಿಡ್ ತಪಾಸಣೆಗಳನ್ನು ಮೂಲಭೂತ ಪ್ರತಿಕಾಯಗಳ ತಪಾಸಣೆಯೊಂದಿಗೆ ಹೆಚ್ಚುವರಿಯಾಗಿ ನಡೆಸಿ ನಡುವಿನ ಅವಧಿಯಲ್ಲಿ ಸೋಂಕಿತರಾದವರನ್ನು ಪತ್ತೆ ಹಚ್ಚುತ್ತದೆ.

**ರಕ್ತ ಪಡೆಯುವಿಕೆ :**

ದಾನಿಯಿಂದ ರಕ್ತವನ್ನು ಪಡೆಯುವ ಎರಡು ಪ್ರಮುಖ ವಿಧಾನಗಳಿವೆ. ಸಾಧಾರಣವಾದ ವಿಧಾನವೆಂದರೆ ರಕ್ತನಾಳದಿಂದ ನೇರವಾಗಿ ಸಂಪೂರ್ಣ ರಕ್ತ ಪಡೆಯುವುದು. ಈ ರಕ್ತವನ್ನು ಕೆಂಪು ರಕ್ತಕಣಗಳು ಹಾಗೂ ಪ್ಲಾಸ್ಮಾಗಳಾಗಿ ಸಾಧಾರಣವಾಗಿ ಪ್ರತ್ಯೇಕಿಸಲಾಗುತ್ತಿದೆ. ಏಕೆಂದರೆ ಬಹಳಷ್ಟು ಗ್ರಾಹಕರು ವರ್ಗಾವಣೆಗೆ ಕೇವಲ ಒಂದು ಘಟಕದ ಅಗತ್ಯ ಮಾತ್ರ ಹೊಂದಿರುತ್ತಾರೆ. ಮತ್ತೊಂದು ವಿಧಾನವೆಂದರೆ ದಾನಿಯಿಂದ ರಕ್ತವನ್ನು ಪಡೆದು ಶೋಧಕಗಳನ್ನು ಬಳಸಿ ಪ್ರತ್ಯೇಕಿಸಿ, ಅಗತ್ಯವಿರುವ ಘಟಕವನ್ನೇ ಉಳಿಸಿಕೊಂಡು ಉಳಿದ ಭಾಗವನ್ನು ದಾನಿಗೆ ಮರಳಿಸುವುದು. ಈ ಪ್ರಕ್ರಿಯೆಗೆ ಅಫೆರೆಸಿಸ್ (Apherisis) ಎಂದು ಕರೆಯಲಾಗುತ್ತದಲ್ಲದೇ ಇದೇ ಉದ್ದೇಶಕ್ಕೆಂದೇ ನಿರ್ಮಿತವಾದ ಸಾಧನದ ಮೂಲಕವೇ ಇದನ್ನು ಮಾಡಲಾಗುತ್ತದೆ. ನೇರ ವರ್ಗಾವಣೆಗಳಿಗೆ ರಕ್ತನಾಳವನ್ನು ಬಳಸಬಹುದು. ಅಥವಾ ಬದಲಿಗೆ ಧಮನಿಗಳಿಂದಲೂ ರಕ್ತವನ್ನು ಪಡೆಯಬಹುದು. ಈ ಸಂದರ್ಭದಲ್ಲಿ ರಕ್ತವನ್ನು ಶೇಖರಿಸಿಡದೇ ದಾನಿಯಿಂದ ಗ್ರಾಹಕನಿಗೆ ವೇಗವಾಗಿ ಹರಿಸಲಾಗುತ್ತದೆ. ಇದೊಂದು ರಕ್ತ ವರ್ಗಾವಣೆಯ ಹಳೆಯ ವಿಧಾನವಾಗಿದ್ದು, ಆಧುನಿಕ ಪದ್ಧತಿಗಳಲ್ಲಿ ಅಪರೂಪವಾಗಿದೆ. ಈ ವಿಧಾನದ ಬಳಕೆಯನ್ನು 2ನೇ ವಿಶ್ವ ಸಮರದ ಸಮಯದಲ್ಲಿ ವ್ಯವಸ್ಥಾಪನೆಯಲ್ಲಾದ ಸಮಸ್ಯೆಗಳಿಂದಾಗಿ ನಿಲ್ಲಿಸಲಾಯಿತಲ್ಲದೇ, ಗಾಯಗೊಂಡ ಸೈನಿಕರನ್ನು ಉಪಚರಿಸುತ್ತಿದ್ದ ವೈದ್ಯರು ನಾಗರೀಕ ಜೀವನಕ್ಕೆ ಮರಳಿದ ನಂತರ ಶೇಖರವಾಗುವ ರಕ್ತಕ್ಕೆ ಸಂಗ್ರಹ ನಿಧಿಯನ್ನು ಆರಂಭಿಸಿದರು.

**ರಕ್ತ ಪಡೆಯುವಿಕೆ ಹಾಗೂ ಸಿದ್ಧತೆ :**

ತೋಳಿನ ದೀರ್ಘವಾದ ಚರ್ಮಕ್ಕೆ ಸಮೀಪವಾಗಿರುವ ರಕ್ತನಾಳದಿಂದ ಸಾಧಾರಣವಾಗಿ ಮೊಳಕೈನ ಒಳಭಾಗದ ಮುಂಗೈ ಮಧ್ಯಸ್ಥ ರಕ್ತನಾಳದಿಂದ (Anticubital Vein) ಪಡೆಯಲಾಗುತ್ತದೆ. ರಕ್ತನಾಳ ಮೇಲಿನ ಚರ್ಮವನ್ನು ಅಯೋಡಿನ್ ಹಾಗೂ ಸ್ಪಿರಿಟ್‌ಗಳ ಮೂಲಕ ಚರ್ಮದ ಮೇಲಿರುವ ಕ್ರಿಮಿಗಳು ಸಂಗ್ರಹಿಸುವ ರಕ್ತವನ್ನು ಕಲುಷಿತಗೊಳಿಸದಂತೆ ಹಾಗೂ ದಾನಿಯ ಚರ್ಮದೊಳಕ್ಕೆ ಸೂಜಿಯನ್ನು ಚುಚ್ಚುವ ಸ್ಥಳದಲ್ಲಿ ಸೋಂಕು ಉಂಟಾಗದಂತೆ ಸ್ವಚ್ಛ ಮಾಡಲಾಗುತ್ತದೆ. 16ರಿಂದ 18ರ ವರೆಗಿನ ಮಾಪನದ ಸೂಜಿ ಹಾದು ಹೋಗುವಾಗ ಕೆಂಪು ರಕ್ತಕಣಗಳನ್ನು ಭೌತಿಕವಾಗಿ ಹಾನಿಗೊಳಿಸದಂತೆ ಸುಲಿತದ ಒತ್ತಡವನ್ನು ಕಡಿಮೆ ಮಾಡಲು ಬಳಸಲಾಗುತ್ತಿದೆ. ತೋಳಿನ ರಕ್ತನಾಳಗಳಲ್ಲಿ ರಕ್ತದ ಒತ್ತಡ ಹೆಚ್ಚಿಸಲು ಹಾಗೂ ಪ್ರತಿಕ್ರಿಯೆಯನ್ನು ವೇಗಗೊಳಿಸಲು ಅನೇಕ ವೇಳೆ ರಕ್ತ ಬಂಧಕ ಪಟ್ಟಿಯನ್ನು ತೋಳಿನ ಮೇಲ್ಭಾಗಕ್ಕೆ ಕಟ್ಟಲಾಗುತ್ತದೆ. ದಾನಿಯ ಕೈಗೆ ಕೊಟ್ಟಿರುವ ಬಾಲನ್ನು ಪದೇ ಪದೇ ಹಿಚುಕುವಂತೆ ಹೇಳುವ ಮೂಲಕ ರಕ್ತನಾಳದಲ್ಲಿ ರಕ್ತದ ಹರಿಯುವಿಕೆಯನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗುತ್ತದೆ.

ಬಹುಸಾಮಾನ್ಯ ವಿಧಾನವೆಂದರೆ ದಾನಿಯ ರಕ್ತನಾಳದಿಂದ 350ರಿಂದ 450 ಮಿಲಿಲೀಟರ್‌ನವರೆಗೆ, ಸೋಡಿಯಂ ಸಿಟ್ರೇಟ್, ಫಾಸ್ಪೇಟ್, ಡೆಕ್ಸ್ ಟ್ರೋಸ್ ಅಡಿನೀನ್ ಹೊಂದಿರುವ (CPDA) ನವ್ಯ ಪ್ಲಾಸ್ಟಿಕ್ ಚೀಲವೊಂದರಲ್ಲಿ ಸಂಗ್ರಹಿಸಲಾಗುತ್ತದೆ. ಈ ರಾಸಾಯನಿಕವು ರಕ್ತವು ಹೆಪ್ಪುಗಟ್ಟದಂತೆ ಹಾಗೂ ಹಾಳಾಗದಂತೆ ಸಂರಕ್ಷಿಸಿಡುತ್ತದೆ. ಸಂಸ್ಕರಣದ ಅವಧಿಯಲ್ಲಿ ಇತರ ರಾಸಾಯನಿಕಗಳನ್ನು ಕೆಲವೊಮ್ಮೆ ಸೇರಿಸಲಾಗುತ್ತದೆ. ಈ ರೀತಿಯಾಗಿ ಪಡೆದ ರಕ್ತವನ್ನು 35ರಿಂದ 42 ದಿನಗಳವರೆಗೆ ರೋಗಿಗಳಿಗೆ ವರ್ಗಾಯಿಸಬಹುದು. ಸಂಗ್ರಹಿಸಿದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳ ಜೀವಿತಾವಧಿ 5 ದಿನಗಳಾಗಿದ್ದು ಪ್ಲಾಸ್ಮಾದ ಅವಧಿ ಒಂದು ವರುಷ ಹಾಗೂ ಕೆಂಪು ರಕ್ತಕಣ (PCV) ಜೀವಿತಾವಧಿ 42 ದಿನಗಳಾಗಿವೆ. ರೋಗಿಯ ಸೋಂಕಿನ ಅನುಸಾರ ಆತನಿಗೆ ರಕ್ತದ ಯಾವ ಘಟಕ ಬೇಕಿದೆಯೋ ಅದನ್ನು ರಕ್ತ ಬ್ಯಾಂಕಿನಿಂದ ಪಡೆಯಲು ವೈದ್ಯರು ಅನುಮೋದಿಸುತ್ತಾರೆ.

ಒಟ್ಟಾರೆ ರಕ್ತದಾನವೇ ಮಹಾದಾನ. ನಮ್ಮ ಒಂದು ಬಾಟಲ್ ರಕ್ತ ರೋಗಿಯ ಜೀವ ಉಳಿಸಲು ಸಹಾಯ ಮಾಡಬಹುದು. ಆರೋಗ್ಯವಂತ ವ್ಯಕ್ತಿ ಒಮ್ಮೆ ರಕ್ತ ಬ್ಯಾಂಕಿಗೆ ಭೇಟಿನೀಡಿ ರಕ್ತದಾನ ಮಾಡಿ ಒಂದು ಜೀವಿಯ ಉಳಿಯುವಿಕೆಯ ಪ್ರಯತ್ನ ಮಾಡುವ ಮಾನವೀಯತೆ ತೋರಬೇಕಿದೆ.

■

# ತ್ರೈಮಾಸ ಕಾಂಡ

ನಳಿನಿಗೆ ಎಚ್ಚರವಾದಾಗ ತಾನು ಹೆರಿಗೆ ವಾರ್ಡ್‌ನಲ್ಲಿ ಮಲಗಿರುವುದು ಅರಿವಿಗೆ ಬಂತು. ನಿನ್ನೆ ತಾನೇ ಸಣ್ಣಗೆ ಹೊಟ್ಟೆನೋವು ಪ್ರಾರಂಭವಾಗಿ ಅಜೀರ್ಣದಿಂದಿರಬೇಕು ಅಂತ ಡಾಕ್ಟರ್ ಸುರೇಶರ ಶಾಪಿಗೆ ಹೋದದ್ದು ನೆನಪಾಗಿ ಇಲ್ಲಿಗೆ ಹೇಗೆ ಬಂದೆ ಅಂತ ಯೋಚನೆಗೀಡಾದಳು. ತಾನೊಂದು ಹೆಣ್ಣು ಮಗುವಿನ ತಾಯಿಯಾಗಿರುವುದನ್ನು ಕೇಳಿದ ಮೇಲಂತೂ ಸಖೇದಾಶ್ಚರ್ಯವಾಯಿತು. ಅವಳ ದೃಷ್ಟಿ ಎದುರಿನ ಗೋಡೆಯ ಮೇಲೆ ಹರಿಯಿತು. ಗಡಿಯಾರ ಬೆಳಗ್ಗಿನ ಎಂಟು ಗಂಟೆ ಐದು ನಿಮಿಷ ತೋರಿಸುತ್ತಿತ್ತು. ಅದರ ಕೆಳಗೇನೇ ಸೋಮವಾರ ಜೂನ್ 13, 2005 ಅಂತ ತೋರಿಸುವ ಸ್ಟಾಂಡಿಂಗ್ ಕ್ಯಾಲೆಂಡರ್ ಕಂಡು ಬಂತು. ಸಾಲದ್ದಕ್ಕೆ ಕೈ ಎತ್ತಿ ವಾಚ್ ನೋಡಿಕೊಂಡಳು. ತನ್ನ ಗಡಿಯಾರ ಐದು ನಿಮಿಷ ಮುಂದೆ ಇದ್ದರೂ ತಾರೀಕು ದಿನ ಎಲ್ಲಾ ಅದೇ. ನೋಡಿ ಮೈ ಝುಂ ಎಂದಂತಾಗಿ ಸಣ್ಣಗೆ ನಡುಗಿದಳು. ತಾನು ತಾಯಿಯಾಗಿರುವೆನೆಂದು ತಿಳಿದು ಬಂದ ಆ ಕ್ಷಣ ಬಹುಶಃ ತಾನು 5-6 ತಿಂಗಳುಗಳಿಂದ ಪ್ರಜ್ಞಾಶೂನ್ಯಳಾಗಿ ಆಸ್ಪತ್ರೆಯಲ್ಲೇ ಇದ್ದೆನೆಂದು ತಿಳಿದುಕೊಂಡಿದ್ದಳು. ಆದರೆ ನಡೆದ ಘಟನೆಯೇ ಬೇರೆ. ಮದುವೆಯಾದ ಮೂರು ತಿಂಗಳಿಗೇನೇ ತಾನೊಬ್ಬಳು ಸಜೀವ ಸದೃಢ ಮಗುವಿಗೆ ಜನ್ಮವಿತ್ತದ್ದನ್ನು ತಾನೇ ನಂಬದಾದಳು. ಏನಿಲ್ಲವೆಂದರೂ ಒಂದು ಮಗು ಜೀವಂತ ನೆಲ ಕಾಣಬೇಕಾದರೆ ಕಡಿಮೆ ಅಂದರೆ 7 - 8 ತಿಂಗಳಾದರೂ ತಾಯಿ ಗರ್ಭದಲ್ಲಿ ಆಶ್ರಯ ಪಡೆದಿರಬೇಕು ಎನ್ನುವುದು ತಾನು ಕಂಡು ಕೇಳಿದ ವಿಷಯ ಇರುವಾಗ ಹೀಗೆ ಹೇಗಾಯಿತು ಅಂತ ಚಿಂತೆಗೊಳಗಾದಳು. ತನ್ನುದರದಲ್ಲಿ ಶಿಶುವೊಂದು ಬೆಳೆಯುತ್ತಿದೆ ಅಂತ ಮುಟ್ಟುನಿಂತ ಕೆಲವೇ ದಿನಗಳಲ್ಲಿ ತನಗೆ ಅರಿವಿಗೆ ಬಂದಿದ್ದರೂ ಮದುವೆಯಾದ ಮೂರೇ ತಿಂಗಳಲ್ಲಿ ತಾನೊಂದು ಮಗುವಿನ ತಾಯಿಯಾಗುತ್ತೇನೆಂದು ಆಕೆ ಕನಸಿನಲ್ಲಿಯೂ ಎಣಿಸಿರಲಿಲ್ಲ. ಅದು ಆಕೆಗೆ ಬೇಕಾಗಿಯೂ ಇರಲಿಲ್ಲ. ಸುಮಾರು 16 ಗಂಟೆಗಳ ಕಾಲ ತಾನು ಪ್ರಜ್ಞಾಶೂನ್ಯ ಅವಸ್ಥೆಯಲ್ಲಿದ್ದೆ ಅಂತ ಲೆಕ್ಕ ಹಾಕಿ ತಾಳೆ ನೋಡಿದ್ದಳು. ಈಗಲೂ ನಾಭಿಯ ಕೆಳಗೆ ಒಂದು ರೀತಿಯ ಸೆಳೆತವಿದ್ದರೂ ಪ್ರಸವ ವೇದನೆಯ ಅರಿವು ತನಗಾಗದಿದ್ದುದನ್ನು ನೆನಪಿಸಿಕೊಂಡು ನಿಟ್ಟುಸಿರು ಬಿಟ್ಟಳು. ತನ್ನ ಬದಿಯಲ್ಲೇ ಮಲಗಿರುವ ಮುದ್ದು ಮಗು ತನ್ನದೆಂದು ತಿಳಿದು ಬಂದಾಗ ಒಂದು ಕಡೆ ಹರ್ಷ ಇನ್ನೊಂದು ಕಡೆ ದುಃಖ ಒಟ್ಟಿಗೆ ಒತ್ತರಿಸಿ ಬಂದು ಒಳಗೊಳಗೇ ಅತ್ತಳು. ಮದುವೆಗೆ ಮುಂಚೆ ಯಾವೊಬ್ಬ ಪುರುಷನ ಸಂಬಂಧವನ್ನೂ ಇಟ್ಟುಕೊಳ್ಳದಿದ್ದ ನಾನು ಇಷ್ಟು ಬೇಗ ತಾಯಿಯಾದದ್ದಾದರೂ ಹೇಗೆ?; ತನಗೆ ಗೊತ್ತಿಲ್ಲದಂತೆ ಏನಾದರೂ ಅಚಾತುರ್ಯ ನಡೆದು ಹೋಯಿತೇ ಹೇಗೆ? ಎಂಬಿವೆ ಪ್ರಶ್ನೆಗಳು ಉದ್ಭವಿಸಿ ತಲೆ ತಿನ್ನತೊಡಗಿದಂತೆ ತಾನು ಶಾಲೆಯಲ್ಲಿ ಕಲಿಯುವಾಗ ಹೂವಿನಲ್ಲಿ ಫಲಧಾರಣೆ ಹಲವು ರೀತಿಯಲ್ಲಿ ಸಾಧ್ಯವಿದೆ-ಮುಖ್ಯವಾಗಿ ಗಾಳಿಯಿಂದ, ನೀರಿನಿಂದ, ಪಶು ಪಕ್ಷಿಗಳಿಂದ, ಕ್ರಿಮಿಕೀಟಗಳಿಂದ ಅಂತೆಲ್ಲಾ ಓದಿದ್ದು ನೆನಪಾಗಿ ಸಣ್ಣಗೆ ಬೆವತಳು. ಯೋಚಿಸುತ್ತಾ ಮಲಗಿದವಳಿಗೆ ಫಕ್ಕನೆ ತನ್ನ ಗಂಡನ ನೆನಪಾಯಿತು. ಪಾಪ, ಅವರಿಗೆ ಇದಾವುದೂ ಇನ್ನೂ ಗೊತ್ತಿರಲಿಕ್ಕಿಲ್ಲ. ಗೊತ್ತಾದ ಆ ಕ್ಷಣ ಏನು ಮಾಡುತ್ತಾರೋ ಏನೋ ಅಂತ ಚಿಂತಿಸುತ್ತಿದ್ದಂತೆಯೇ ಅತ್ತೆ ನಾದಿನಿಯರು ತನಗೆ ಪ್ರಜ್ಞೆ ಬಂದಿರುವುದನ್ನು ಕೇಳಿ ಒಳ ಬರುತ್ತಿರುವುದು ಕಂಡು ಬಂತು. ಅವರ ಮಾತನ್ನು ಕೇಳಿದ ಮೇಲಂತೂ ನಳಿನಿಯ ಮನಸ್ಸು ಇನ್ನಷ್ಟು ಛಿದ್ರವಾಯಿತು.

'ನನ್ನ ಮೂಗನ್ನೇ ಕೊಯ್ದು ಮುಖ ಎತ್ತಿ ತಿರುಗಾಡದಂತೆ ಮಾಡಿದ ಇವಳಿಗೆ ಪ್ರಜ್ಞೆ ಬಾರದಿದ್ದರೂ ಇಷ್ಟು ದುಃಖವಾಗುತ್ತಿರಲಿಲ್ಲ. ಇಂತವರು ಬದುಕಿ ಯಾರಿಗೇನಾಗಬೇಕಾಗಿದೆ? ಮದುವೆಗೆ ಮುಂಚೆ ಯಾರನ್ನು ಕಟ್ಟಿಕೊಂಡಿದ್ದಳೋ? ಚಿನ್ನದಂಥ ನನ್ನ ಮಗನಿಗೆ ಮೋಸ ಮಾಡಿದಳು. ಇಂತಹ ಹಾದರಗಿತ್ತಿ ಅಂತ ನನಗೆ ಗೊತ್ತಿರಲಿಲ್ಲ'

ಹಾಗೆ ಹೀಗೆ ಅಂತ ಬಾಯಿಗೆ ಬಂದಂತೆ ಉಗುಳಿ ಮಗು ಅಳುತ್ತಿದ್ದರೂ ಗಮನಿಸದೆ ಅವರು ಹಾಗೆಯೇ ಹೊರಟುಹೋದದ್ದು ನಳಿನಿಗೆ ವಿವಸ್ತ್ರವಾಗಿಸಿ ಪಬ್ಲಿಕ್‌ನಲ್ಲಿ ಛಡಿಯೇಟು ಕೊಟ್ಟಂತಾಗಿತ್ತು. ಒತ್ತರಿಸಿ ಬಂದ ದುಃಖವನ್ನು ಹತೋಟಿಯಲ್ಲಿಟ್ಟು ಕೊಳ್ಳುವಷ್ಟು ಸಾಮರ್ಥ್ಯ ಅವಳಲ್ಲಿರಲಿಲ್ಲ. ಅತ್ತು ಅತ್ತು ಕಣ್ಣು ಶುಷ್ಕವಾದಾಗ ಸಿಕ್ಕ ಸಿಕ್ಕವರ ಬಾಯಿಯ ಹಳಸಿದ ಅನ್ನವಾಗುವುದಕ್ಕಿಂತ ಸಾಯುವುದೇ ಉತ್ತಮ ಅಂತ ಲೆಕ್ಕ ಹಾಕಿ ಟೊಯ್‌ಲೆಟ್ ನೆಪದಲ್ಲಿ ನರ್ಸನ್ನು ಕರೆಯಿಸಿಕೊಂಡಳು. ನರ್ಸ್‌ಳ ಹಿಂದೆ ಸಣ್ಣಗೆ ನಡೆದ ನಳಿನಿ ಬಾತ್‌ರೂಮ್‌ಗೆ ಕಾಲಿಟ್ಟವಳೆ ನರ್ಸನ್ನು ಹೊರಗೆ ತಳ್ಳಿ ಬಾಗಿಲು ಮುಚ್ಚಿ ಅಗಳಿ ಹಾಕಿಕೊಂಡಳು. ನರ್ಸಿಗೆ ಕೂಗಿಕೊಳ್ಳಲೂ ಆಸ್ಪದ ಸಿಗಲಿಲ್ಲ. ಮರುಕ್ಷಣ ಒಳಗೆ ಫುಸ್ ಅಂತ ಸ್ವಿಚ್ ಒಡೆದು ಫ್ಯೂಸ್ ಹಾರಿಹೋದ ಶಬ್ದ ಕೇಳಿಸಿತು. ಹಾಗೆಯೇ ಒಮ್ಮೆ ಮಿಂಚಿದ ಹಾಗೂ ಕಂಡಿತು. ಹಿಂದೆಯೇ ದಬ್ ಅಂತ ಬಿದ್ದ ಶಬ್ದ !

* * *

ನಾನು ಡಾಕ್ಟರ್ ಚತುರ್ವೇದಿ. ಮದುವೆಯಾದ ಮೂರೇ ತಿಂಗಳಲ್ಲಿ ಆದ ನನ್ನ ಹೆಂಡತಿಯ ಅಕಾಲ ಮರಣದ ದುಃಖವನ್ನು ಸಹಿಸಿಕೊಳ್ಳಲಾರದವನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಮರಣಕ್ಕೆ ಯಾರೂ ಕಾರಣೀಭೂತರಲ್ಲದಿದ್ದರೂ ನನ್ನ ಹೆಂಡತಿಯ ಮರಣಕ್ಕೆ ನಾನೇ ಕಾರಣ ಅಂತ ಈ ಕೊನೆಯ ಗಳಿಗೆಯಲ್ಲಾದರೂ ಹೇಳಿಕೊಳ್ಳದಿದ್ದರೆ ಆತ್ಮವಂಚನೆ ಮಾಡಿಕೊಂಡಂತಾದೀತು. ಮಾತ್ರವಲ್ಲ ಹೆಂಡತಿಗೂ ದ್ರೋಹ ಬಗೆದಂತಾದೀತು. ನಾನೊಬ್ಬ ಡಾಕ್ಟರ್ ಆಗಿದ್ದು ಪ್ರಯೋಗಾಲಯವೊಂದನ್ನು ನಡೆಯಿಸಿಕೊಂಡು ಹೋಗುತ್ತಿರುವುದು ನಿಮ್ಮಲ್ಲಿ ಬಹು ಮಂದಿಗೆ ತಿಳಿದ ವಿಷಯ. ಹೀಗಿದ್ದೂ ನನ್ನ ಹೆಂಡತಿ ನಿನ್ನೆ ಬಂದ ಹೊಟ್ಟೆ ನೋವಿನ ವಿಷಯ ನನಗೆ ತಿಳಿಸದಿದ್ದುದು ನಿಗೂಢ. ಬಹುಶಃ ನನಗೆ ಮುಖ್ಯವಾಗಿ ನನ್ನ ಪ್ರಯೋಗಗಳಿಗೆ ತೊಂದರೆಯಾಗದಿರಲಿ ಅಂತ ಇದ್ದರೂ ಇರಬಹುದು. ಅದೇನೇ ಇರಲಿ; ಈ ತನಕ ನಮ್ಮಿಬ್ಬರ ಪ್ರೀತಿಯಲ್ಲಿ ಎಂದೂ ಬಾಧಕ ಬಂದದ್ದಿಲ್ಲ ಎನ್ನುವುದು ಸರ್ವವಿಧಿತ.

ನನ್ನದೇ ಚರಿತ್ರೆಯನ್ನು ಬಿಡಿಸುವುದಿದ್ದಲ್ಲಿ ಅದೊಂದು ಸಣ್ಣ ಪುರಾಣವೇ ಆಗುತ್ತದೆ. ಕುಟುಂಬ ಯೋಜನೆ ಶಿಬಿರದ ಮುಖ್ಯಸ್ಥನಾಗಿ ಊರೂರು ತಿರುಗುತ್ತಿದ್ದ ನನಗೆ ಎಲ್ಲಿಯೂ ಜನರ ಸರಿಯಾದ ಬೆಂಬಲ ಸಿಗದೆ ನಮ್ಮ ಯೋಜನೆಗಳೇ

✍ ಜಿ.ವಿ. ಕಂಚುಗಾರ

ದೋಷಾಯುಕ್ತವಾಗಿ ಕಾಣತೊಡಗಿ ಆರೇ ತಿಂಗಳಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟೆ. ಅಷ್ಟಕ್ಕೆ ಸುಮ್ಮನುಳಿಯಲಿಲ್ಲ. ಜನಸೇವೆ ಮಾಡಬೇಕೆನಿಸಿ ಬರ್ತ್‌ಕಂಟ್ರೋಲ್ ವಿಷಯವಾಗಿ ಆಳವಾಗಿ ಯೋಚಿಸಿ ಈ ವಿಷಯವಾಗಿ ಸಂಶೋಧನೆ ನಡೆಸಿದೆ. 9 - 10 ತಿಂಗಳಿಗೆ ಹುಟ್ಟುವ ಮಗು ಗರ್ಭ ಕೋಶದಲ್ಲೇ ಇನ್ನೂ ಹೆಚ್ಚಿನ ಸಮಯ ಉಳಿಯುವಂತೆ ಮಾಡುವ ಯೋಜನೆ ನನ್ನ ತಲೆಯಲ್ಲಿ ಸುಳಿದರೂ ಅದು ಸ್ವಾಗತಾರ್ಹವಾಗಿ ಕಂಡು ಬಾರದೆ ಮೂಡಿದ ಹಾಗೆಯೇ ಮಾಯವಾಗಿ ಹೋಯಿತು. 9 -10 ತಿಂಗಳ ಬದಲಾಗಿ 2 - 3 ತಿಂಗಳಲ್ಲೇ ಸದೃಢ ಜೀವಂತ ಮಗು ಹುಟ್ಟುವಂತೆ ಮಾಡುವುದು ಸಾಧ್ಯವಾದಲ್ಲಿ ಬಹುತೇಕ ಹೆಂಗಸರು ಸ್ವಾಗತಿಸಿಯಾರು ಅಂತ ನನ್ನ ಮನಸ್ಸಿಗೆ ಮತ್ತೆ ಹೊಳೆದು ನನ್ನದೇ ಆದ ಪ್ರಯೋಗ ಶಾಲೆಯಲ್ಲಿ ಆ ವಿಷಯವಾಗಿ ಸಂಶೋಧಿಸುತ್ತಾ ಅಹೋ ರಾತ್ರಿ ಅಲ್ಲೇ ಕೊಳೆಯತೊಡಗಿದೆ. ತತ್‌ಪರಿಣಾಮವಾಗಿ ಒಂದು ದಿನ ನನ್ನ ಕನಸು ನಿಜವಾಗುವ ಕಾಲ ಒದಗಿ ಬಂತು.

ಗರ್ಭಕೋಶದಲ್ಲಿ ಮೊಳಕೆಯೊಡೆದ ಭ್ರೂಣದ ಬೆಳವಣಿಗೆಯಲ್ಲಿ ಭಾಗವಹಿಸುವ ಎಲ್ಲಾ ಗರ್ಭಾಂಗಗಳನ್ನು ಪ್ರಚೋದಿಸುವಂತೆ ಮಾಡಿ ಮಗು ತೀವ್ರವಾಗಿ ಬೆಳೆಯುವಂತೆ ಮಾಡುವ ದ್ರಾವಣವೊಂದು ನನ್ನ ಕೈ ಸೇರಿತು. ಅದರೊಂದಿಗೆ 2 - 3 ತಿಂಗಳು ಗರ್ಭಕೋಶಕ್ಕೆ ಸಂಬಂಧಪಟ್ಟ ಅಂಗಾಂಗಗಳೆಲ್ಲಾ ನಿರೀಕ್ಷೆಗೂ ಮೇಲ್ಪಟ್ಟು ಕಾರ್ಯತತ್ಪರವಾಗಿರುವುದರಿಂದ ಮಗು ಹುಟ್ಟಿದ ಮುಂದಿನ 3 - 4 ವರ್ಷ ಆ ಅಂಗಾಂಗಗಳೆಲ್ಲಾ ತಮ್ಮ ಕಾರ್ಯ ಚಟುವಟಿಕೆಯ ಶಕ್ತಿಯನ್ನು ಕಳೆದುಕೊಂಡು ಜಡತ್ವ ಹೊಂದಿ ನಿದ್ರಾವಸ್ಥೆಯಲ್ಲಿ ಇರಬೇಕಾಗುವುದು ತಿಳಿದು ಬಂತು.

ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಯ ದೃಷ್ಟಿಯಿಂದ ಇದೊಂದು ಕುಟುಂಬ ಯೋಜನೆಯ ಮಹತ್ತರ ಮೈಲುಗಲ್ಲಾಗಿ ಪರಿಣಾಮ ಬೀರಬಹುದಾಗಿ ಬಂದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಒಂದು ಕಲ್ಲಿನಲ್ಲಿ ಎರಡು ಹಕ್ಕಿ

ಹೊಡೆದ ಆನಂದವಾಯಿತು. ಒಂದು ಕಡೆ ಹೆಂಗಸರಿಗೆ 9 - 10 ತಿಂಗಳು ಹೊಟ್ಟೆ ಹೊತ್ತುಕೊಂಡು ತಿರುಗುವ ಕಷ್ಟ ತಪ್ಪಿದರೆ ಇನ್ನೊಂದು ಕಡೆ ಸ್ವಯಂ ಆಗಿ 3 - 4 ವರ್ಷ ಸಂತತಿ ನಿಯಂತ್ರಣ ಮಾಡಿಕೊಂಡ ಹಾಗೂ ಆಗುತ್ತದೆ ಎಂದು ತಿಳಿದು ನನ್ನ ಶ್ರಮ ಸಾರ್ಥಕವಾದುದಕ್ಕೆ ಒಳಗೊಳಗೇ ಬಹಳ ಹೆಮ್ಮೆಪಟ್ಟೆ. ಆದಷ್ಟು ಬೇಗ ಈ ವಿಷಯ ಭಾರತ ಸರಕಾರದ ಗಮನಕ್ಕೆ ಹೋಗಿ ವಿಶ್ವದಾದ್ಯಂತ ಹರಡುವ ಕನಸು ಕಾಣುತ್ತಾ ಈ ರೀತಿ ಕೈ ಸೇರಿದ ದ್ರಾವಣವನ್ನು ಒಂದು ಗಾಜಿನ ಹೂಜಿಯಲ್ಲಿ ಶೇಖರಿಸಿಟ್ಟು ಪ್ರಯೋಗಾತ್ಮಕ ಪರೀಕ್ಷೆಗಾಗಿ ಕಾಯತೊಡಗಿದೆ. ಹಾಗೆಯೇ ಈ ರೀತಿಯಾಗಿ ಮೂರೇ ತಿಂಗಳಲ್ಲಿ ಹುಟ್ಟುವ ಮಗು 9 - 10 ತಿಂಗಳಿಗೆ ಹುಟ್ಟುವ ಮಗುವಿಗಿಂತ ಯಾವ ರೀತಿಯಲ್ಲೂ ಕಡಿಮೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಈ ದ್ರಾವಣದಲ್ಲಿ ಇದೆಯೇ ಎನ್ನುವುದರ ಕುರಿತು ಮತ್ತೆ ಸಂಶೋಧನೆ ನಡೆಸತೊಡಗಿದೆ.

ಹೀಗಿರುವಾಗ ಒಂದು ದಿನ ಇದೇ ನಳಿನಿಯ ಮದುವೆಯ ವಿಷಯವಾಗಿ ಯಾರೋ ನನ್ನ ಹತ್ತಿರ ಪ್ರಸ್ತಾಪ ಎತ್ತಿದರು. ಒಂದು ಶುಭ ಮುಹೂರ್ತದಲ್ಲಿ ನಮ್ಮಿಬ್ಬರ ಮದುವೆಯೂ ನಡೆದು ಹೋಯಿತು. ಮದುವೆಯಾಗಿ ಒಂದೆರಡು ತಿಂಗಲು ಕಳೆದಿತ್ತಷ್ಟೆ, ಒಂದು ದಿನ ನಳಿನಿ ನಾನು ತಂದೆಯಾಗಲಿರುವ ವಿಷಯವನ್ನು ನನ್ನ ಕಿವಿಯಲ್ಲುಸಿರಿ ಏಕೋ ಏನೋ ಮೈ ಚೆನ್ನಾಗಿಲ್ಲ ಎಂದಳು. ತಂದೆಯಾಗಲಿರುವ ಸಂತೋಷದಿಂದ ಉಬ್ಬಿ ಹೋದ ನಾನು ಎಲ್ಲಾ ಸರಿ ಹೋಗುತ್ತದೆ ಅಂತ ಹೇಳಿ ಆಕೆಗೊಂದು ಇಂಜಕ್ಷನ್ ಕೊಟ್ಟೆ. ಆ ನಂತರದ ಹೆಚ್ಚಿನ ಸಮಯವೆಲ್ಲಾ ನಾನು ಪ್ರಯೋಗ ಶಾಲೆಯಲ್ಲೇ ಕಳೆಯುತ್ತಿದ್ದುದರಿಂದ ನಳಿನಿಯತ್ತ ವಿಶೇಷ ಗಮನ ಕೊಡಲು ನನ್ನಿಂದಾಗಿರಲಿಲ್ಲ. ನಾನು ಶೇಖರಿಸಿಟ್ಟಿದ್ದ ದ್ರಾವಣದಲ್ಲಿ ಆದ ಅವರೆಬೀಜ ಗಾತ್ರದ ಬಿಳಿ ಹುಳುಗಳು ನನ್ನ ಕುತೂಹಲವನ್ನು ಕೆರಳಿಸಿದ್ದವು. ಅವು ಹೇಗಾದವು ಏಕಾದವು ಎಂಬ ಸಂಶೋಧನೆಯಲ್ಲಿ ನಿರತನಾಗಿದ್ದ ನನಗೆ ಅವುಗಳು ಸ್ರವಿಸಿದ ಲೋಳೆಯಿಂದಾಗಿ ನಾನು ಶೇಖರಿಸಿಟ್ಟಿದ್ದ ದ್ರಾವಣ ಮೂಲಭೂತಗುಣವನ್ನು ಕಳೆದುಕೊಳ್ಳುವ ಲಕ್ಷಣ ಕಂಡು ಬಂತು. ತಲೆ ಎತ್ತಿ ನೋಡಿದೆ. ಹಗ್ಗಕ್ಕೆ ನೇತು ಹಾಕಿದ್ದ ಎರಡು ಸಿರಿಂಜುಗಳಲ್ಲಿ ತುಂಬಿಟ್ಟ ದ್ರಾವಣ ಯಾವೊಂದು ಮಾರ್ಪಾಡು ಹೊಂದದೆ ತಟಸ್ಥವಾಗಿರುವುದು ನೋಡಿ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು. ಅಷ್ಟರೊಳಗೆ ಕಾಲಿನ ಮೇಲೆ ಏನೋ ಹರಿದ ಹಾಗಾಗಿ ದೃಷ್ಟಿ ಬದಲಿಸಿದೆ. ದ್ರಾವಣದ ಹೂಜಿಯ ಮುಚ್ಚಳವನ್ನು ದೂಡಿಕೊಂಡು ಗಾಳಿ ಸೇವನೆಗೆ ಹೊರಟ ಹುಳುಗಳ ದಂಡು ನನ್ನನ್ನು ದಂಗು ಬಡಿಸಿದವು. ಅವುಗಳಲ್ಲಿ ಕೆಲವು ನನ್ನ ಪಾದಗಳ ಮುಖಾಂತರ ನನ್ನ ಮೇಲೆ ಆಕ್ರಮಣಕ್ಕೆ ಪ್ರಾರಂಭ ಮಾಡಿದ್ದವು. ಒಮ್ಮೆ ಮೈ ಝುಂ ಎಂದಂತಾಗಿ ಕಾಲು ಕೊಡವಿದೆ. ಅಷ್ಟು ದೂರ ಹೋಗಿ ಬಿದ್ದ ಹುಳುಗಳು ಒಮ್ಮೆಲೆ ರೆಕ್ಕೆ ಬಂದವುಗಳಂತೆ ಹಾರತೊಡಗಿದವು. ನನಗೆ ಭಯವಾಯಿತು. ಹಗ್ಗಕ್ಕೆ ನೇತು ಹಾಕಿದ್ದ ಒಂದು ಸಿರಿಂಜನ್ನು ಕಿತ್ತುಕೊಂಡು ಪ್ರಯೋಗಶಾಲೆಯ ಗಾಜಿನ ಬಾಗಿಲನ್ನು ದೂಡಿ ನಡುಕೋಣೆಗೆ ಬಂದವ ಹೊರಗಿನಿಂದ ಬೋಲ್ಟ್ ಹಾಕಿಕೊಂಡೆ. ಬಾಗಿಲನ್ನು ಎಷ್ಟು ಭದ್ರಪಡಿಸಿಕೊಂಡಿದ್ದರೂ ಮೈ ನಡುಕ ಸಂಪೂರ್ಣ ನಿಂತಿರಲಿಲ್ಲ. ಪುನಃ ಪ್ರಯೋಗ ಶಾಲೆಯ ಒಳಗೆ ದೃಷ್ಟಿ ಹರಿಸಿದೆ. ಒಳಗಿನ ದೃಶ್ಯ ನೋಡಿ ಮೈ ಬೆವರತೊಡಗಿತು. ದ್ರಾವಣದ ಪೂರ್ಣ ಸತ್ವವನ್ನು ಹೀರಿಕೊಂಡವುಗಳಂತೆ ಬೆಳೆದಿದ್ದ ಹುಳುಗಳು ದ್ರಾವಣದ ಹೂಜಿಯನ್ನು ಒಡೆದು ಹಾಕಿ ತಮ್ಮದೇ ಸರ್ವಾಧಿಕಾರವೆಂಬಂತೆ ಚೆಲ್ಲಾಟವಾಡುತ್ತಿರುವುದನ್ನು ನೋಡಿ ನನ್ನ ಗಂಟಲು ಒಣಗತೊಡಗಿತ್ತು. ಅಲ್ಲಲ್ಲಿ ರೆಕ್ಕೆ ಬಲಿತ ಹುಳುಗಳು ಕಣ್ಣು ಕಟ್ಟಿ ಬಿಟ್ಟವರಂತೆ ಸಿಕ್ಕ ಸಿಕ್ಕ ಹೂಜಿಗಳಿಗೆ ಢಿಕ್ಕಿ ಹೊಡೆದ ಪ್ರಯುಕ್ತವಾಗಿ ಆಮ್ಲಜನಕ ಜಲಜನಕದಂತಹ ಅನಿಲಗಳಲ್ಲದೆ ಗಂಧಕ ರಂಜಕದಂತಹ ಸ್ಫಟಿಕ ದ್ರವ್ಯಗಳೂ ಪ್ರಯೋಗಾಲಯದ ತುಂಬ ಹರಡಿ ಹೋಗಿ ಕೆಲವೇ ಕ್ಷಣಗಳಲ್ಲಿ ಅನಾಹುತ ಸಂಭವಿಸುವುದು ಖಚಿತವೆನ್ನುವುದು ಹೊಳೆಯಿತು. ಇನ್ನೇನು ಅಲ್ಲಿಂದ ಓಡಿ ಬಿಡುವುದು ಅಂತ ಲೆಕ್ಕ ಹಾಕುತ್ತಿದ್ದಂತೆಯೇ ಫೋನ್ ಬಾರಿಸಿಕೊಳ್ಳಲಾರಂಭಿಸಿತು. ತುರ್ತು ಕೆಲಸಕ್ಕಾಗಿ ಮಾತ್ರ ಸೀಮಿತವಾದ ಫೋನ್ ಬೆಲ್ ಕೇಳಿ ಹಾಗೆಯೇ ಹೋಗಲು ಮನಸ್ಸಾಗಲಿಲ್ಲ. ಟೆಲಿಫೋನ್ ಎತ್ತಿಕೊಂಡೆ. ಮದುವೆಯಾದ ಮೂರು ತಿಂಗಳಲ್ಲೇ ತಾಯಿಯಾದ ನಳಿನಿ ಆತ್ಮಹತ್ಯೆ ಮಾಡಿಕೊಂಡಳು ಅಂತ ಕೇಳಿ ತಲೆ ಸುತ್ತತೊಡಗಿತ್ತು. ನಳಿನಿಯ ಹಿಂದೆಯೇ ನನ್ನ ಪ್ರಾಣ ಹೋದಷ್ಟು ನಾನು ದುರ್ಬಲಗೊಂಡಿದ್ದೆ. ಆಕೆ ಇಲ್ಲದೆ ಬದುಕುವುದು ಅಸಾಧ್ಯವೆನಿಸಿ ಆತ್ಮಹತ್ಯೆಗೆ ಮನ ಮಾಡಿದೆ. ವಿಷಯವನ್ನು ಚಿಕ್ಕದಾಗಿ ಕಾಗದದಲ್ಲಿ ಮಂಡಿಸಿ ಸಿರಿಂಜನ್ನು ತೆಗೆದುಕೊಂಡು ಹೊರಗೆ ಹೋಗಬೇಕೆಂದಿದ್ದೆನಷ್ಟೇ; ಪ್ರಯೋಗಾಲಯಕ್ಕೆ ಬೆಂಕಿ ತಗಲಿರುವುದು ಕಂಡು ಬಂತು.

ಜೀವಂತ ಬೆಂಕಿಗಾಹುತಿಯಾಗುವುದರ ಮುನ್ನ ಆತ್ಮಹತ್ಯೆಗೆ ಸಿದ್ಧತೆ ಮಾಡಿಕೊಂಡಿದ್ದೇನೆ. ನನ್ನ ಸಾವು ಆಕಸ್ಮಿಕವಾಗದೆ ಆತ್ಮಹತ್ಯೆಯಾದಲ್ಲಿ ನನ್ನ ಹೆಂಡತಿಯ ಆತ್ಮಕ್ಕೆ ಶಾಂತಿ ಸಿಕ್ಕೀತು ಅಂತ ನನ್ನ ಅನಿಸಿಕೆ. ಅಂತೆಯೇ ಆಕೆಯನ್ನು ನಿರ್ದೋಷಿ ಅಂತ ಸಾಧಿಸಲು ನನ್ನ ಈ ಕೋಟಿನ ಕಿಸೆಯಲ್ಲಿ ಸಿರಿಂಜನ್ನು ಈ ಕಾಗದವನ್ನೂ ಇಟ್ಟು ಭದ್ರವಾಗಿ ಕಟ್ಟಿ ಹೊರಗೆ ಎಸೆಯುತ್ತಿದ್ದೇನೆ. ಮುಟ್ಟು ನಿಂತ ಕೆಲವೇ ದಿನಗಳಲ್ಲಿ (ಪ್ರಾಯ ಆಗಿ ಮುಟ್ಟು ನಿಂತ ಹೆಂಗಸರನ್ನು ಹೊರತು ಪಡಿಸಿ) ಗರ್ಭ ನಿಂತಿದೆ ಅಂತ ಗೊತ್ತಾದ ಯಾವುದೇ ಹೆಂಗಸಿಗೆ ಈ ಇಂಜಕ್ಷನ್‌ನ್ನು ನಾಭಿಯ ಹತ್ತಿರ ಚುಚ್ಚುವುದರಿಂದ ಆಕೆ ಮೂರೇ ತಿಂಗಳಲ್ಲಿ ಜೀವಂತ ಮಗುವಿನ ತಾಯಿಯಾಗುತ್ತಾಳೆ. ಪರೀಕ್ಷಿಸಿ ನೋಡಿ. ನನ್ನನ್ನೂ ನನ್ನವಳನ್ನೂ ಮುಕ್ತರಾಗಿಸಿ. ನನ್ನನ್ನು ಮಾನಸಿಕವಾಗಿ ಬಳಲಿಸಿ ನನ್ನವಳನ್ನು ಬಲಿ ತೆಗೆದುಕೊಂಡ ಈ ದ್ರಾವಣದ ಬಗ್ಗೆ ನಾನು ಏನನ್ನೂ ಹೇಳಬಯಸುವುದಿಲ್ಲ. ನನ್ನ ಮರಣ ಹೇಗಾಯಿತೆಂದು ಚಿಂತೆಯಾಗಲಿ ಈ ದ್ರಾವಣ ಹೇಗೆ ತಯಾರಾಗಿದೆಯೆಂಬ ಯೋಚನೆಯಾಗಲಿ ನಿಮಗೆ ಬೇಡ.

ಇತೀ ಮಾನವ ಕುಲ ಹಿತಚಿಂತಕ,

ಡಾ. ಚತುರ್ವೇದಿ

ದೀರ್ಘವಾದ ಕಾಗದವನ್ನೋದಿದ ಡಾ. ಮೇಜವಾನಿಯವರು ತಲೆ ಎತ್ತಿ ನೋಡಿದರು. ಅಗ್ನಿ ಶಾಮಕದಳದವರು ಬರುವುದರೊಳಗೆ ಪ್ರಯೋಗಾಲಯ ಪೂರ್ಣವಾಗಿ ಭಸ್ಮವಾಗುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಉಳಿದಿರಲಿಲ್ಲ. ದ್ರಾವಣ ತುಂಬಿದ ಸಿರಿಂಜು ಮಾತ್ರ ಕೋಟಿನ ಕಿಸೆಯಲ್ಲೇ ತನ್ನತ್ತ ಅಣಿಕು ದೃಷ್ಟಿಯಿಂದ ನೋಡುತ್ತಿರುವಂತೆ ಕಂಡು ಬಂತು. ಗರ್ಭನಿಂತ ಪ್ರತಿ ಸಲ ಎರಡು ಮೂರು ತಿಂಗಳಲ್ಲೇ ಗರ್ಭಕಿತ್ತು ಹೋಗುತ್ತದೆ ಅಂತ ಹಲವಾರು ಬಾರಿ ತನ್ನ ದವಾಖಾನೆಗೆ ಬಂದಿದ್ದ ಶ್ರೀಮಂತ ಮಹಿಳೆಯೊಬ್ಬಳು ಡಾ. ಮೇಜವಾನಿಯವರ ತಲೆಯಲ್ಲಿ ಮಿಂಚಿ ಮಾಯವಾದಳು. ದ್ರಾವಣದ ಸತ್ಯಾಸತ್ಯತೆಯನ್ನು ಕಂಡು ಹಿಡಿಯುವುದರೊಂದಿಗೆ ತಕ್ಕಷ್ಟು ಹಣವನ್ನು ಲಪಟಾಯಿಸಬಹುದೆಂದು ಮನಸ್ಸಿನಲ್ಲೇ ಲೆಕ್ಕ ಹಾಕಿಕೊಂಡರು. ಅಷ್ಟು ಹೊತ್ತಿಗೆ ದೂರದಿಂದ ಸೈರನ್ನಿನ ಶಬ್ದ ಕೇಳಲಾರಂಭಿಸಿ ವಾಸ್ತವಕ್ಕೆ ಬಂದರು.

ನರಗುಂದ ಜೂನ್ 14 : ಇಲ್ಲಿನ ಗಾಂಧಿ ಚೌಕ್ ಹತ್ತಿರದ ಮೂರು ಮಾಳಿಗೆ ಕಟ್ಟಡವೊಂದಕ್ಕೆ ನಿನ್ನೆ ಬೆಳಿಗ್ಗೆ ಆಕಸ್ಮಿಕವಾಗಿ ಬೆಂಕಿ ತಗಲಿದೆ ಎನ್ನಲಾಗಿದೆ. ಬೆಂಕಿಗೆ 13 ಜನ ಜೀವಂತ ಆಹುತಿಯಾದರೆಂದೂ 32 ಜನ ಸೀರಿಯಸ್ ಇದ್ದು ನರಗುಂದ ಸರಕಾರಿ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ಅಧಿಕೃತ ವರದಿಯಾಗಿದೆ. ಕೆಳ ಅಂತಸ್ತಿನಲ್ಲಿ ಹೆಚ್ಚಾಗಿ ಅಂಗಡಿಗಳೆ ಇದ್ದು 2 ನೆಯ ಹಾಗೂ ಮೂರನೆಯ ಅಂತಸ್ತು ಡಾ. ಚತುರ್ವೇದಿ ಎನ್ನುವವರೊಬ್ಬರ ಖಾಸಗಿ ಪ್ರಯೋಗ ಶಾಲೆಯಾಗಿತ್ತೆಂದು ತಿಳಿದು ಬಂದಿದೆ. ಬೆಂಕಿ ತಗುಲಿದ ಸಮಯ ಡಾ. ಚತುರ್ವೇದಿಯವರು ಪ್ರಯೋಗ ಶಾಲೆಯಲ್ಲೇ ಇದ್ದರೆಂದು ಬಲ್ಲ ಮೂಲಗಳಿಂದ ವ್ಯಕ್ತವಾಗಿದೆ. ಹಾಗಿದ್ದೂ ಅವರ ಸಾವಿನ ಪೂರ್ಣ ಪುರಾವೆ ಸಿಗದೇ ಇರುವುದರಿಂದ ಅವರು ಬೆಂಕಿಯಿಂದ ಪಾರಾಗಿ ಎಲ್ಲಿಯೋ ತಲೆ ಮರೆಸಿಕೊಂಡಿದ್ದಾರೆ ಅಂತ ಬೆಂಕಿ ತಗುಲಿದ ಸಮಯ ಅಲ್ಲಿ ಉಪಸ್ಥಿತರಿದ್ದ ಡಾ. ಮೇಜವಾನಿಯವರ ಅಭಿಪ್ರಾಯ ಮಾತ್ರವಲ್ಲ; ಅವರು ಕಂಡು ಹಿಡಿದ, ಜನಸಂಖ್ಯೆಯ ಬೆಳವಣಿಗೆಯನ್ನು ಸುಲಭದಲ್ಲಿ ತಡೆ ಹಿಡಿಯಬಹುದಾದ ಆ ದ್ರಾವಣ ಇಂದಲ್ಲ ನಾಳೆ ಮತ್ತೆ ಮಾನವನ ಕೈ ಸೇರಲಿದೆ ಎಂದೂ ಅವರು ತಮ್ಮ ಅಭಿಪ್ರಾಯದಲ್ಲಿ ವ್ಯಕ್ತಪಡಿಸಿದ್ದಾರೆ.

# ಇತಿಹಾಸ ಮತ್ತು ಪರಂಪರೆಯ ಪ್ರಜ್ಞೆಯುಳ್ಳ ಕಾದಂಬರಿ

# ಡಾ. ಬಿ. ಜನಾರ್ದನ ಭಟ್ ಅವರ 'ಉತ್ತರಾಧಿಕಾರ'

ಉತ್ತರಾಧಿಕಾರ (ವರ್ಧಮಾನ ಶ್ರೇಷ್ಠ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಕಾದಂಬರಿ)
ಕಾದಂಬರಿಕಾರರು–ಡಾ.ಬಿ.ಜನಾರ್ದನ ಭಟ್
ಪ್ರಕಾಶಕರು–ಹೇಮಾವತಿ ಪ್ರಕಾಶನ, ಮಂಗಳೂರು
ಬೆಲೆ–150

ಮನುಷ್ಯನ ಬದುಕನ್ನು ರೂಪಿಸುವುದು ಅವನ ಜೀವನ ಶೈಲಿ, ಅವನ ಪರಿಸರ. ಬದುಕು ಚಲನಶೀಲ. ನಿತ್ಯ ನಿರಂತರ. ಕಾಲಪ್ರವಾಹದಲ್ಲಿ ಕೊಚ್ಚಿಹೋಗುವ ಅವನ ಜೀವನದಲ್ಲಿ ನಡೆಯುವ ಘಟನೆಗಳು ಹಲವಾರು. ಬದುಕಿನಲ್ಲಿ ಎದುರಿಸುವ ಸಂಘರ್ಷಗಳು ಅನೇಕ. ಕೆಲವೊಮ್ಮೆ ಜೀವನ ಅನ್ನುವುದು ಪೂರ್ವನಿಯೋಜಿತವೋ ಅನಿಸಿದರೆ ಮತ್ತೊಮ್ಮೆ ಅಕಸ್ಮಿಕ ಅನಿಸುತ್ತದೆ. ನಾವು ಬದುಕಿದ ರೀತಿನೀತಿಗಳು, ನಮ್ಮ ಸುತ್ತಮುತ್ತಲಿನ ಘಟನೆಗಳು ಕೆಲವೊಮ್ಮೆ ನಮಗರಿಯದಂತೆ ಇತಿಹಾಸವನ್ನೇ ನಿರ್ಮಿಸುತ್ತದೆ. ಮಗದೊಮ್ಮೆ ಇತಿಹಾಸ ನಮ್ಮನ್ನು ರೂಪಿಸುತ್ತಾ ಹೋಗುತ್ತದೆ. ಅಂತಹ ಕಥಾಹಂದರವನ್ನೊಳಗೊಂಡ ಕಾದಂಬರಿ ಡಾ.ಬಿ.ಜನಾರ್ಧನ್ ಭಟ್ ಅವರ 'ಉತ್ತರಾಧಿಕಾರ'.

ಡಾ. ಬಿ. ಜನಾರ್ಧನ ಭಟ್ ಅವರು ಕಥೆ, ಕಾದಂಬರಿಯ ಜೊತೆ ಜೊತೆಯಲ್ಲಿ ವಿಚಾರಸಾಹಿತ್ಯ, ಮಕ್ಕಳ ಸಾಹಿತ್ಯ, ಅನುವಾದ, ಕಥೆ, ಸಂಪಾದನೆ ಹೀಗೆ ವಿಪುಲವಾಗಿ ಸಾಹಿತ್ಯಕ್ಷೇತ್ರದಲ್ಲಿ ಕೃಷಿಯನ್ನು ಮಾಡಿದ್ದಾರೆ. ಆಂಗ್ಲ ಉಪನ್ಯಾಸಕರಾಗಿರುವ ಅವರು ಆಂಗ್ಲ ಮತ್ತು ಕನ್ನಡ ಭಾಷೆಯ ಸಾಹಿತ್ಯವನ್ನು ಧಾರಳವಾಗಿ ಓದಿಕೊಂಡು ತಮ್ಮ ಜ್ಞಾನಸಾಗರವನ್ನು ವಿಸ್ತರಿಸುತ್ತಾ ಹೋದವರು. ವಿಮರ್ಶಾಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಬೀರಿದವರು. ಒಳ್ಳೆಯ ವಿಮರ್ಶಕರಾಗಿ ಹೆಸರು ಮಾಡಿರುವ ಅವರು ಕಾದಂಬರಿಕಾರರಾಗಿಯೂ ಗುರುತಿಸಿಕೊಂಡಿರುವುದು ಶ್ಲಾಘನೀಯ ಅಂಶ. ಮಂಗಳೂರಿನ ಹೇಮಾವತಿ ಪ್ರಕಾಶನದಿಂದ ಪ್ರಕಟಗೊಂಡಿರುವ 'ಉತ್ತರಾಧಿಕಾರ' ಕಾದಂಬರಿಗೆ 'ವರ್ಧಮಾನ ಪ್ರಶಸ್ತಿಯ' ಗರಿ ಮುಡಿಗೇರಿದೆ ಎನ್ನುವುದು ಅಭಿಮಾನದ ಸಂಗತಿ.

ಬಹಳ ಸಮಯದಿಂದ ಬರೆಯಬೇಕೆಂದಿರುವ ಅವರ ಕಾದಂಬರಿಯ ಕುರಿತು ಮತ್ತೆ ನೆನಪಾದದ್ದು ಇತ್ತೀಚೆಗೆ ಬೆಳ್ಮಣ್ಣು ಮುಂಡ್ಕೂರಿನಲ್ಲಿ ಹಳೆಯ ಶಿವಾಲಯ ಪತ್ತೆಯಾಗಿದೆ ಎಂಬ ಸುದ್ದಿಯನ್ನು ಓದಿದಾಗ. ಜನಾರ್ಧನ ಭಟ್ ಅವರ ಉತ್ತರಾಧಿಕಾರ ಕಾದಂಬರಿಯ ವಿಷಯ, ಕಥೆಯ ವಸ್ತು ಒಂದು ಹಳ್ಳಿಯಲ್ಲಿ ಹಳೆಯ ದೇವಸ್ಥಾನದ ಅವಶೇಷಗಳು ದೊರೆತು ಊರಿನ ಹಿರಿಯರ ಮಾರ್ಗದರ್ಶನದಂತೆ ಅದರ ಜೀರ್ಣೋದ್ಧಾರ ಕಾರ್ಯದಲ್ಲಿ ತೊಡಗುವುವ ಸನ್ನಿವೇಶ. ಬಹುಶ: ಹಾಗಾಗಿ ಈ ಕಾದಂಬರಿ ಮತ್ತೆ ನೆನಪಾಯಿತೋ ಏನೋ. ಆದರೆ ಜನಾರ್ಧನ ಭಟ್ ಅವರು ಎಂದೋ ಬರೆದ ಕಾದಂಬರಿಯ ಕಾಲ್ಪನಿಕತೆ ಪ್ರಸ್ತುತದಲ್ಲಿ ನೈಜ ಘಟನೆಯಾಗಿ ನಮ್ಮೆದುರು ನಿಂತಿರುವುದನ್ನು ಕಂಡು ಆಶ್ಚರ್ಯವಾಯಿತು.

'ಉತ್ತರಾಧಿಕಾರ' ಕಾದಂಬರಿ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಹಳ್ಳಿಯ ಚಿತ್ರಣವನ್ನು ನೀಡುತ್ತದೆ. ಕಾದಂಬರಿಕಾರರು ಕಾಲ್ಪನಿಕ ನಡುಕಣಿ ಹಾಗೂ ಪಡುಸಾಲಿ ಎಂಬ ಎರಡು ಗ್ರಾಮಗಳ ಜನರ ಜೀವನದ ಸಂಘರ್ಷವನ್ನು ಬಹಳ ಅಚ್ಚುಕಟ್ಟಾಗಿ ನಿರೂಪಿಸುತ್ತ ಹೋಗಿದ್ದಾರೆ. ಕಾದಂಬರಿಯ ಆರಂಭದಲ್ಲಿ ಪ್ರಾಚೀನ ದೇವಾಲಯದ ಅವಶೇಷ ದೊರೆತು ಅದನ್ನು ಪುನರ್ ನಿರ್ಮಿಸುವ ಕ್ರಿಯೆಯಿಂದ ಆರಂಭವಾಗುತ್ತದೆ. ಇಲ್ಲಿ ಸೇರುವ ಜನರೇ ಈ ಕಾದಂಬರಿಯ ಕೇಂದ್ರಬಿಂದುಗಳು. ಸ್ವಾತಂತ್ರ್ಯೋತ್ತರದಿಂದ ಸ್ವಾತಂತ್ರ್ಯಪೂರ್ವದವರೆಗೂ ನಡೆಯುವ ಘಟನೆಗಳು ಆ ಎರಡೂ ಹಳ್ಳಿಗಳ ಭೂತ, ವರ್ತಮಾನ, ಭವಿಷ್ಯತ್ತುಗಳ ಕುರಿತು ಸೂಕ್ಷ್ಮವಾಗಿ ನಿರೂಪಿಸುತ್ತಾ ಕಥೆ ಸಾಗುತ್ತದೆ. ಒಂದೊಂದೇ ಬಿಡಿ ಕಥೆಗಳನ್ನು ಈ ಕಾದಂಬರಿಯಲ್ಲಿ ಎಳೆ ಎಳೆಯಾಗಿ ಬಿಡಿಸಿ ಓದುಗರಿಗೆ ಎಲ್ಲಿಯೂ ಗೊಂದಲವಾಗದಂತೆ ಜಾಗ್ರತೆ ವಹಿಸಿರುವುದು ಒಂದು ಒಳ್ಳೆಯ ಕಾದಂಬರಿಕಾರರ ಲಕ್ಷಣವೆನ್ನಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ಅಲ್ಲಿನ ಜನರ ಜನಜೀವನ, ಅವರ ಕಷ್ಟಕಾರ್ಪಣ್ಯಗಳನ್ನು ಜನಾರ್ಧನ್ ಭಟ್ ಅವರು ನೈಜವಾಗಿ ಚಿತ್ರಿಸುತ್ತಾ ಹೋಗಿದ್ದಾರೆ. ಆ ಕಾಲದಲ್ಲಿ ಪಟೇಲರ ವೈಭವ, ಆ ವೈಭವ, ದರ್ಪದ ನಡುವೆಯೂ ಜನರ ಕುರಿತಾಗಿ ಅವರಿಗಿದ್ದ ಕಾಳಜಿ , ಬಡತನದ ಅರಿವು , ಸಹಾಯ ಮಾಡುವ ಉದಾತ್ತ ಮನೋಭಾವ ಎಲ್ಲವೂ ಅನುಕರಣೀಯ. ಈ ಗುಣಗಳು ದರ್ಪ, ಅಹಂಕಾರದ ಪ್ರತಿರೂಪಗಳಾಗಿರುವ ಇಂದಿನ ರಾಜಕಾರಣಿಗಳಿಗೆ ಯಾಕಿಲ್ಲ ಎನ್ನುವ ನೋವು ನಮ್ಮನ್ನು ಕಾಡುತ್ತದೆ.




ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಅವರದ್ದೇ ಆದ ವಿಶಿಷ್ಟ ಸ್ವಭಾವದವರು. ಯಮುನಕ್ಕ, ವಾಗ್ದೇವಿ ಜಗಳಗಂಟಿಗಳಾದರೂ ಕಷ್ಟ ಸುಖದಲ್ಲಿ ಭಾಗಿಯಾಗುವವರು. ಪಟೇಲರ ಮಡದಿ ತನ್ನ ಮನೆಗೆ ಬಂದವರಿಗೆ ಅದೆಷ್ಟೇ ಜನರಾದರೂ ತುಟಿಪಿಟಿಕ್ಕೆನ್ನದೆ ಪ್ರೀತಿಯಿಂದ ಮಾಡಿ ಬಡಿಸುವ ಅನ್ನಪೂರ್ಣೆ. ಪಟೇಲರ ಸ್ವಭಾವಕ್ಕೆ ತಕ್ಕ ಮಡದಿ. ಅವರೆಲ್ಲರ ಪುಣ್ಯ ಕಾರ್ಯದಲ್ಲಿ ಒಡತಿಗೆ ಸಹಕರಿಸುವ ಲೀಲಕ್ಕನದು ಮೌನ ಪಾತ್ರ. ಕಷ್ಟದಲ್ಲೂ ಪ್ರೀತಿ ತುಂಬಿದ ಆ ಊರಿನ ಜನರ ಪಾತ್ರಗಳಿಗೆ ಜನಾರ್ಧನ್ ಭಟ್ ಅವರು ನ್ಯಾಯ ನೀಡುತ್ತಾ ಹೋಗಿದ್ದಾರೆ. ಕೆಲವು ನೈತಿಕ ಚೌಕಟ್ಟುಗಳನ್ನು ಮೀರಿ ಅನೈತಿಕತೆಯ ಎಲ್ಲೆಯನ್ನು ಮೀರಿದ ಪಾತ್ರವಾದರೆ, ಕೆಲವು ಮಮತಾಮಯಿಯಾಗಿ, ಪತಿಯ ಆಜ್ಞಾಪಾಲಕಿಯಾಗಿ ಇಲ್ಲಿನ ಸ್ತ್ರೀಪಾತ್ರಗಳು ಚಿತ್ರಿತವಾಗಿದೆ.

ಆ ಎರಡೂ ಊರಿನ ಜನರೇ ಈ ಕಾದಂಬರಿಯ ಜೀವನಾಡಿ. ಇಲ್ಲಿ ಯಾವ ಪಾತ್ರವೂ ಪ್ರಮುಖವಲ್ಲ. ಯಾವುದೋ ಅಮುಖ್ಯವಲ್ಲ. ಪೌಂಡ್ರಕ ವಾಸುದೇವನ ಪಾತ್ರ ಇಂದಿನ ಸುಳ್ಳು, ಮೋಸದ ಜೀವನ ನಡೆಸಿ ದರ್ಪದಿಂದ ಬಾಳುವವರಿಗೆ ಹೆಚ್ಚು ಬಾಳಿಕೆ ಇಲ್ಲ ಎಂದು ತೋರಿಸಿದರೆ, ಕಷ್ಟ ಪಟ್ಟು ಓದಿ ಮುಂದೆ ಬರುವ ವಾಸುದೇವ ಯುವಜನತೆಗೆ ಆದರ್ಶವಾಗುತ್ತಾನೆ. ಇಡೀ ಕಾದಂಬರಿ ಒಂದು ಸಮುದಾಯದ ಸುತ್ತ ತಿರುಗುತ್ತಾ ಅನೇಕ ಉಪಕಥೆಗಳನ್ನು, ಪವಾಡಗಳನ್ನು ಸೃಷ್ಟಿಸುತ್ತಾ ಓದುಗನನ್ನು ಸರಾಗವಾಗಿ ಓದಿಸಿಕೊಂಡು ಹೋಗುವ ಕಾದಂಬರಿ ಉತ್ತರಾಧಿಕಾರ.

✍ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ

ಇಲ್ಲಿ ನಾವು ಗಮನಿಸಬೇಕಾದ ಕೆಲವು ಮಹತ್ವದ ಸಂಗತಿಗಳೆಂದರೆ ಆಯಾಯ ಕಾಲಕ್ಕೆ ಸರಿಯಾಗಿ ಪಾತ್ರಗಳನ್ನು ಸೃಷ್ಟಿಸಿರುವುದು. ಎರಡು ಹಳ್ಳಿಗಳ ಬೌಗೋಳಿಕ ಚಿತ್ರಣ, ಜನರ ವ್ಯವಹಾರ, ಭಾಷಾ ವ್ಯವಹಾರ(ತುಳು ಮತ್ತು ಕನ್ನಡ) ಮಂತ್ರ ತಂತ್ರ, ಆಚಾರ ವಿಚಾರ, ನಂಬಿಕೆಗಳು, ಬೇಸಾಯದ ಚಿತ್ರಣ, ಬೆಳೆಯ ಸೊಗಸು ಇವೆಲ್ಲವೂ ಎಲ್ಲೋ ನಾವು ಮರೆತುಹೋಗಿರುವ ಸುಂದರ ಜಗತ್ತನ್ನು ಮತ್ತೆ ಪ್ರವೇಶಿಸಿದ ವಿಶಿಷ್ಟ ಅನುಭವವನ್ನು ಈ ಕಾದಂಬರಿ ನೀಡುವಲ್ಲಿ ಯಶಸ್ಸಾಗಿದೆ. ಕೇರಳದ ಮಂತ್ರಶಕ್ತಿಯ ಮಹಿಮೆಯನ್ನು ಅಲ್ಲಲ್ಲಿ ಬಣ್ಣಿಸುತ್ತಾ ಹೋಗುವ ಶೈಲಿಯಿಂದಾಗಿ ಜನಾರ್ಧನ್ ಭಟ್ ಅವರು ಅಗೋಚರ ಶಕ್ತಿಗಳಿಗೂ ಜೀವ ತುಂಬಿದ್ದಾರೆ. ಇಲ್ಲಿ ಕಾದಂಬರಿಕಾರರು ಅವರ ಕನ್ನಡ ಮಾತ್ರವಲ್ಲ ಆಂಗ್ಲ ಸಾಹಿತ್ಯದ ಆಳವಾದ ಅನುವವನ್ನು ಧಾರೆಯೆರಿದಿದ್ದಾರೆ. ಉದಾಹರಣೆಗೆ ಅತಿಮಾನುಷ ಶಕ್ತಿಯ ಕುರಿತು ಮಾತನಾಡುತ್ತಾ ಕಾದಂಬರಿಕಾರರು ಶೇಕ್ಸ್‌ಪಿಯರನ ಟೆಂಪೆಸ್ಟ್ ನಾಟಕದಲ್ಲಿ ಪ್ರೋಸ್ಪೆರೋ ಅನ್ನುವ ಮಂತ್ರವಾದಿ ಏರಿಯಲ್ ಅನ್ನುವ ಶಕ್ತಿಯನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ಅತಿಮಾನುಷವಾದ ಪವಾಡಗಳನ್ನು ಮಾಡುತ್ತಿದ್ದ ಉದಾಹರಣೆಯನ್ನು ನೀಡುತ್ತಾ ಆ ಕಾಲದಲ್ಲಿದ್ದ ನಂಬಿಕೆಗೆ ಪುಷ್ಠಿಯನ್ನು ನೀಡುತ್ತಾರೆ.

ಜಾತಿ,ಮತ,ಭೇದಗಳನ್ನು ಮನುಷ್ಯನೇ ಮಾಡಿರುವುದು ಎನ್ನುವುದಕ್ಕೆ ಈ ಕಾದಂಬರಿಯಲ್ಲಿ ಕೆಲವು ನಿದರ್ಶನಗಳನ್ನು ನೀಡಿದ್ದಾರೆ. ಬಪ್ಪನಾಡು ಬ್ಯಾರಿಯು ದೇವಿಯ ದೇವಸ್ಥಾನವನ್ನು ಅವಳ ಅಪ್ಪಣೆಯಂತೆ ಕಟ್ಟಿಸಿದ್ದು, ಉಡುಪಿಯ ಲಕ್ಷದೀಪ ನಿರಂತರ ಸುರಿವ ಮಳೆಗೆ ನಿಂತುಹೋಗುವ ಸಂದರ್ಭ ಬಂದಾಗ ಹಾಜಿ ಅಬ್ದುಲ್ಲಾ ಎಂಬ ಸಾಹೇಬರು ರಾಶಿ ರಾಶಿ ಕರ್ಪೂರವನ್ನು ಕೊಟ್ಟು ದೀಪೋತ್ಸವ ಸಾಂಗವಾಗಿ ನೆರವೇರುವಂತೆ ಮಾಡಿದ ಘಟನೆಗಳನ್ನು ದುಲ್ಸಿನಾಬಾಯಿಗೆ ವಿವರಿಸುವ ಮೂಲಕ ಜಾತಿ ಮತ ಭೇದವನ್ನು ದೇವರು ಮಾಡಿದ್ದಲ್ಲ ಎಂದು ಸಾಮರಸ್ಯದ ಸಂದೇಶವನ್ನು ಈ ಕಾದಂಬರಿಯಲ್ಲಿ ಸಾರಿದ್ದಾರೆ. ಇಂತಹ ಹಲವಾರು ಸಮಾಜಮುಖಿ ಸಂದೇಶಗಳನ್ನು ನಾವು ಈ ಕಾದಂಬರಿಯಲ್ಲಿ ನೋಡಬಹುದು. ದೇವಾಲಯದ ಜೀರ್ಣೋದ್ಧಾರದ ಕಾರ್ಯದಲ್ಲೂ ಎಲ್ಲರೂ ಬೆರೆತು ಒಂದಾಗಿ ಬೆಟ್ಟದಂತಹ ಕೆಲಸವನ್ನು ಹುಲ್ಲಿನಷ್ಟು ಹಗುರಾಗಿ ಮುಗಿಸುವ ಚಿತ್ರಣದ ಮುಖೇನ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಸತ್ಯಾಂಶವನ್ನು ಓದುಗರ ಅರಿವಿಗೆ ತಲುಪಿಸುವ ಪ್ರಯತ್ನವೂ ಈ ಕಾದಂಬರಿಯದ್ದಾಗಿದೆ.

ಈ ಕಾದಂಬರಿಯಲ್ಲಿ ನಡೆಯುವ ಕೆಲವೊಂದು ಪವಾಡಗಳು, ನಂಬಿಕೆಗಳು ಆಕರ್ಷಕವಾಗಿ ಮೂಡಿಬಂದಿವೆ. ಅದನ್ನು ನಂಬುವುದು ಬಿಡುವುದು ಓದುಗನಿಗೆ ಬಿಟ್ಟದ್ದು. ಇಲ್ಲಿನ ಸೈತಾನನ ಜಾತ್ರೆ, ದೇಯಿ ನಲಿಕೆ, ಮಾಟ, ಮಂತ್ರ ಈ ಎಲ್ಲಾ ವಿಷಯಗಳು ನೈಜವಾಗಿ ನಡೆಯುತ್ತಿದೆಯೋ ಎಂಬಂತೆ ಚಿತ್ರಿಸಿರುವುದು ಜನಾರ್ಧನ ಭಟ್ ಅವರ ಜಾಣ್ಮೆಗೆ ಸಾಕ್ಷಿ. ಈ ಕಾದಂಬರಿಯಲ್ಲಿ ಬರುವ ಪೌಂಡ್ರಕ ವಾಸುದೇವ ತನ್ನಲ್ಲಿ ಯಾವ ಒಳ್ಳೆಯ ಗುಣಗಳಾಗಲಿ, ಪ್ರತಿಭೆಯಾಗಲೀ ಇಲ್ಲದಿದ್ದರೂ ಕೇವಲ ತನ್ನ ಹುಟ್ಟಿನ ಅಧಿಕಾರದಲ್ಲಿ ದೇವಸ್ಥಾನದ ಪೂಜೆಯನ್ನು ಮಾಡುವ ಸುಬ್ರಾಯರ ಮಗ ತಾನೆಂದೂ, ದೇವಾಲಯದ ಪೂಜೆಯ ಉತ್ತರಾಧಿಕಾರಿ ತಾನೇ ಎಂದು ಸಾಬೀತುಪಡಿಸುವ ಅವನ ವಿಶಿಷ್ಟ ಸ್ವಭಾವವೂ ಕಾದಂಬರಿಗೆ ಹೊಸತನವನ್ನು ನೀಡುತ್ತದೆ. ಅವನಿಗೇ ತಿಳಿಯದ ಪ್ರಶ್ನೆಗಳ ಉತ್ತರಕ್ಕಾಗಿ ಅಧಿಕಾರ ಚಲಾಯಿಸುವುದು ಅವನ ಸ್ವಭಾವ. ಕೈಲಾಗದವನು ಮೈಪರಚಿಕೊಂಡಾಂತಾಯಿತು ಎನ್ನುವ ಪರಿಸ್ಥಿತಿ ಅವನದ್ದು. ಇನ್ನು ವಾಸುದೇವನಾದರೋ ಆಧುನಿಕ ಮನೋಭಾವವನ್ನು ಬೆಳೆಸಿಕೊಂಡು, ವಿದ್ಯಾವಂತನಾಗಿ ಆ ಊರಿನ ನಿಜವಾದ ಅರ್ಥದಲ್ಲಿ ಉತ್ತರಾಧಿಕಾರಿಯಾಗಿ ಕಂಗೊಳಿಸುವವನು. ಆದರೆ ಅವನಿಗೆ ಆ ಯಾವ ವ್ಯಾಮೋಹವೂ ಇಲ್ಲದೆ ತನ್ನ ತಂದೆ ತಾಯಿಯೊಂದಿಗೆ ಅಮೇರಿಕೆಗೆ ತೆರಳುವುದು ನಮ್ಮಲ್ಲಿನ ಒಳ್ಳೆಯ ಪ್ರತಿಭೆಗಳು ದೇಶ ಬಿಟ್ಟು ವಿದೇಶ ಸೇರುವ ಪ್ರಕ್ರಿಯೆ ಹಿಂದಿನಿಂದಲೂ ನಡೆದುಬಂದಿದೆ ಎನ್ನುವ ನೋವೂ ಇಲ್ಲಿದೆ.

ಡಾ.ಬಿ.ಜನಾರ್ಧನ ಭಟ್ ಅವರ ಕಾದಂಬರಿಯ ಭಿನ್ನ ಕಥಾವಸ್ತು, ನಿರೂಪಣಾಶೈಲಿ, ಅಧ್ಯಯನಶೀಲ ವಿಷಯ ಮಂಡನೆ ವಿಸ್ಮಯವನ್ನು ಹುಟ್ಟಿಸುತ್ತದೆ. ಶಿವಮಂತ್ರ ಆ ದೇವಾಲಯದ ನಾಲ್ಕೂ ಸುತ್ತ ಅನುರಣಿಸುತ್ತಾ ಭಕ್ತಿಪರವಶತೆಯಿಂದ ಕಾದಂಬರಿ ಕೊನೆಗೊಳ್ಳುತ್ತದೆ. ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳು ಕಾದಂಬರಿಯನ್ನು ಸರಳವಾಗಿ ಅರ್ಥೈಸಲು ಓದುಗನಿಗೆ ಬಹಳಷ್ಟು ಸಹಕಾರಿಯಾಗಿದೆ. ಒಟ್ಟಿನಲ್ಲಿ ವಿಭಿನ್ನ ನೆಲೆಯಲ್ಲಿ ನಿರೂಪಿಸಲ್ಪಟ್ಟ, ಸೂಕ್ಷ್ಮ ವಿಷಯಗಳಿಂದ ಕೂಡಿದ ಈ ಕಾದಂಬರಿ ಕನ್ನಡ ಸಾಹಿತ್ಯಕ್ಕೆ ಒಂದು ಮೌಲಿಕವಾದ ಕೊಡುಗೆಯಾಗಿದೆ. ■

# ನೇಸರು ಜಾಗತಿಕ ಮಾಸ್ತಿ ಸ್ಮರಣಾರ್ಥ ಸಣ್ಣ ಕತೆ ಸ್ಪರ್ಧೆ – 2016

ಮೈಸೂರು ಅಸೋಸಿಯೇಷನ್ 90 ವರ್ಷ ಪೂರ್ಣವಾದ ಸಂದರ್ಭದಲ್ಲಿ ಕನ್ನಡ ಸಣ್ಣಕತೆಗಳ ಸ್ಪರ್ಧೆಯನ್ನು ಆಯೋಜಿಸುತ್ತಿದೆ. ಕನ್ನಡ ಸಣ್ಣಕತೆಗಳ ಪಿತಾಮಹರೆಂದೇ ಪ್ರಸಿದ್ಧರಾದ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರ 125ನೇ ಜನ್ಮದಿನೋತ್ಸವದ ಈ ಸಂದರ್ಭದಲ್ಲಿ ಈ ಸ್ಪರ್ಧೆಯಲ್ಲಿ ಅವರ ಸ್ಮರಣಾರ್ಥ ಆಯೋಜಿಸಲಾಗುತ್ತಿದೆ. ಇದರಲ್ಲಿ ವಿಶ್ವದ ಎಲ್ಲ ಕನ್ನಡ ಲೇಖಕರೂ ಭಾಗವಹಿಸಬಹುದಾಗಿದೆ. ಯಾವುದೇ ಪ್ರವೇಶ ಶುಲ್ಕವಿಲ್ಲ ಮತ್ತು ವಿಷಯದ ನಿರ್ಬಂಧವೂ ಇಲ್ಲ.

1. ಸ್ಪರ್ಧೆಯಲ್ಲಿ ಎಲ್ಲ ಕನ್ನಡ ಲೇಖಕರಿಗೆ ಭಾಗವಹಿಸಲು ಅವಕಾಶವಿದೆ,
2. ಸ್ಪರ್ಧೆಗೆ ಕಳುಹಿಸುವ ಸಣ್ಣಕತೆ ಸ್ವಂತದ್ದಾಗಿರಬೇಕು.
3. ಅನುವಾದಗಳಿಗೆ ಮತ್ತು ಕೃತಿ ಚೌರ್ಯಕ್ಕೆ ಅವಕಾಶವಿಲ್ಲ.
4. ಕತೆಗಳು 1000 ಪದಗಳಿಗೆ ಮೀರದಂತಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಸ್ಫುಟವಾಗಿ ಹಸ್ತಲಿಖಿತ ಇಲ್ಲವೇ ಕಂಪ್ಯೂಟರ್ ಮುದ್ರಿತ ಕತೆಗಳನ್ನು ಅಂಚೆ ಮೂಲಕ ಇಲ್ಲವೇ ಇಮೇಲ್ ಮೂಲಕ ಕಳಿಸಬಹುದು.
5. ಈ ಮೊದಲೇ ಪ್ರಕಟವಾದ ಕತೆಗಳಿಗೆ ಅವಕಾಶವಿಲ್ಲ.
6. ಕತೆಗಾರರ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ, ಹಾಗೂ ಇಮೇಲ್ ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಬೇಕು.
7. ಒಬ್ಬರಿಗೆ ಒಂದೇ ಕತೆ ಕಳಿಸಲು ಅವಕಾಶ.
8. ಸ್ಪರ್ಧೆಗೆ ಬಂದ ಕತೆಗಳನ್ನು ಹಿಂತಿರುಗಿಸಿ ಕಳಿಸಲಾಗುವುದಿಲ್ಲ.
9. ಬಹುಮಾನಗಳು:
   ಅ. ಮೊದಲ ಬಹುಮಾನ : ರೂ. 10,000/–
   ಬ. ಎರಡನೆಯ ಬಹುಮಾನ : ರೂ. 5,000/–
   ಕ. ಮೂರನೆಯ ಬಹುಮಾನ : ರೂ. 3,000/–
   ಡ. ಪ್ರೋತ್ಸಾಹಕ ಬಹುಮಾನಗಳು (ಎರಡು): ರೂ. 1,000/–
10. ಕತೆಗಳನ್ನು ಸ್ವೀಕರಿಸಲು ಅಂತಿಮ ದಿನಾಂಕ : 20–08–2016
11. ಎಲ್ಲ ಬಹುಮಾನಗಳು ಸ್ಪರ್ಧೆಗೆ ಬಂದ ಕತೆಗಳ ಸಂಖ್ಯೆ ಮತ್ತು ತೀರ್ಪುಗಾರರ ನಿರ್ಣಯಕ್ಕೆ ಅಧೀನವಾಗಿವೆ.
12. ತೀರ್ಪುಗಾರ ತೀರ್ಮಾನವೇ ಅಂತಿಮ.

**ಕತೆಗಳನ್ನು ಕಳುಹಿಸಬೇಕಾದ ವಿಳಾಸ :**

The Mysore Association, Mumbai
393, Bhau Daji Road,
Matunga, Mumbai 400 019
email: kate.nesaru@gmail.com

ಬಹುಮಾನಿತ ಹಾಗೂ ಇತರ ಕತೆಗಳನ್ನು ಮುಂಬೈನ ಮೈಸೂರು ಅಸೋಸಿಯೇಶನ್ ಮುಖವಾಣಿಯಾದ ನೇಸರು ಮಾಸಿಕ ಪತ್ರಿಕೆಯಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುವುದು.
ಬಹುಮಾನ ಸಮಾರಂಭದ ದಿನ ಈ ಸ್ಪರ್ಧೆಯ ಬಗ್ಗೆ, ವಿಜೇತರ ಬಗ್ಗೆ, ಮಾಸ್ತಿಯವರ ಬದುಕು ಬರಹದ ಬಗ್ಗೆ, ಕನ್ನಡ ಸಣ್ಣಕತೆಗಳ ಇಂದಿನ ಸ್ಥಿತಿಗತಿಗಳ ಬಗ್ಗೆ ಲೇಖನಗಳುಳ್ಳ ನೇಸರು ಪತ್ರಿಕೆಯ ವಿಶೇಷಾಂಕವೊಂದನ್ನು ಹೊರತರಲಾಗುವುದು.

*ವೈ. ಡಿ. ವೆಂಕಟೇಶ್*
*(ಗೌ. ಕಾರ್ಯದರ್ಶಿ)*

# Grand Finale to Swaramurthy V.N.Rao's Birth Centenary Celebrations

The year 2015 – 16 is the birth centenary year of Mysore Asthana Sangeetha vidwan, Ganakalabhushana, Madhuragana Praveena, vocalist , veena and harp player; guru, author and composer, Swaramurthy V.N.Rao. The yearlong celebration of this event by concerts dedicated to the compositions of Swaramurthy and Veene Seshanna by various cultural organizations was given a fitting finale by Swaramurthy V.N.Rao Memorial Trust holding a 5 daylong event from 15th to 19th of this month to mark the occasion. Swaramurthy V.N.Rao Memorial Trust has instituted two prestigious national awards over a decade ago and gives away each year an award to an instrumentalist in the name of Veene Seshanna and another award to a vocalist in the name of Swaramurthy V.N.Rao. The unique feature of this festival was that some of the veterans who were the recipients of these awards and some young and upcoming talents participated in it.

The first day – 15th July - The event started with a concert by Vidushi Anjali Sri Ram, a student of well-known vocalist M.S.Sheela. She opened with a varna in raga Begade composed by Swaramurthy. She then rendered Seshanna's well known composition 'Sharade Varade' in raga Kalyani. Good diction and swara prasthana marked the concert.

This was followed by a formal inauguration of the Festival. H.H the Jeeyar of Yathiraja Mutt, Prof S.V Sharma, Vidwan Srimushnam Raja Rao and Smt. R.Poornima lit the lamp and symbolically inaugurated the event. The Jeeyar, in his address spoke about the role of music in our culture.

This was followed by a concert of Ganakalabhushana R.K Padmanabha. He sang a rare composition of Thyagaraja, "Varashiki Vahaana Varija Lochana" in raga Supradeepa. He also presented Vasudevacharya's composition 'Sharade Pahimaam' in Yadukula Kambodhi and Seshanna's 'Rama Ninnu Nera Nammitira" among other numbers. Well supported by the accompanying artists, the concert delighted the music lovers.

The second day – 16th July – The opening concert was by Vidushi Yoga Keerthan. She rendered some good compositions like 'Sridara Pahi Dayakara', 'Taramugadu Ra Paramatma Neeku' and 'Kailasa Natha Enna Samrakshiso'. Good alaap and swara prasthana marked the concert. She concluded with 'Tirupathi Venkata Ramana' in Sindhu Bhairavi.

Vidushi M.S. Sheela commenced the second concert of the day with a varna of Swaramurthy in raga Begade. Her rendering of Veene Seshanna's 'Rama Ninnu Nera Nammitira' in raga Ananda Bhairavi and 'Kamakshi Pahimam Meenakshi Kanjadalayathakshi' of Jayachamaraja Wodeyar in raga Shivakambodhi was very impressive. Good support by veteran accompanists made the concert a delight to all music lovers.



The third day – 17th July – The program was a unique one consisting of veena concerts by eleven eminent vainikas, throughout the day. It commenced with a veena due by vidushis Geetha Ramanand and Revathy Murthy. They opened with a varna composed by Swaramurthy. They played Swaramurthy's composition 'Ninna Nambideno Sri Gurudeva' in Dharmavathy raga and concluded the concert with Veene Seshann's famous Tillana in raga Jenjhuti.



This was followed by concerts by another veena duet by Rajalakshmi Thirunarayanan and Rathnaprabha Krishna. The highlight of their concert was the varna composed by Veene Seshanna. It was a raga malika of 14 ragas, beginning with Behag.

Concerts by Manjula Surendra, V. Gopal, and Shubha Santoash, followed. Pushpa Kashinath's concert was marked by good rendering of ragas Kambodhi and Nata Bhairavi.

Dr.Suma Sudhindra opened the concert with a Thyagaraj''s krithi in raga Mayamalavagowla. She played raga, thana and pallavi in raga Kaapi, and concluded with a thillana of Swathi Thirunal in raga Dhanashree.

Jayanthi Kumareshan chose to present exclusively a raga thana and pallavi, which was much appreciated by the audience.

D. Balakrishna presented Veene Seshanna's 'Bhajanaseya' in raga Kedara and 'Taramugadura' in raga Dharmavathy. He also presented a Purandaradasa kriti 'Maanava Janma Doddadu' in Purvi Kalyani' among other numbers.

Though the program covered the entire day, it was successful in keeping the interest of the audience alive and there was not a moment when they felt it to be an over dose of veena or to be repetitive. In fact, the day long program brought to fore the various intricacies and finer nuances that could be brought out in veena.

The fourth day – 18th July – The first concert was by Pavan Rangachar which was well received by the audience.

The second concert of the day was by Rudrapattana brothers – R.N.Thyagarajan and R.N. Tharanathan. They opened the concert with 'Saraswathe Bhagavathe' in raga Atana. Their 'Ramabhi Rama' and 'Inta Shodhanamunaku Nenu Patramaa Ramayya' impressed the audience very much. The concert was marked with a lot of melody in it.

The fifth day – 19th July – the first concert was by K.V.Krishna Prasad who is a disciple of R.K.Padmanabha. he began the concert with a Vasudevacharya's kriti 'Lambodaram Avalambaye' in raga Kambodhi. He presented 'Gangadhara Gourishwara' in raga Gowri and 'Rama Ninnu Nera Nammitira' in raga Ananda Bhairavi, both the kritis composed by Veene Seshanna.

This was followed by a Valedictory function in which retd. Justice N.Kumar, Ravindra Bhandaray, GM of Canara Bank and K.N.Venkatanarayana, President of Visvesvaraya co-op Bank were the guests. Justice Kumar delivered the valedictory address.

The final concert of the festival was by Malladi Brothers , Sriram and Ravi Kumar. They opened the concert with a Thyagaraja's kriti 'Guruleka yaduvanti" in raga Gowri Manohari. This was followed by another Thyagaraja kriti in raga Begade. They also presented Veene Seshanna's "Gangadhara Gowrivara' in raga Gowri, among other items.

The five day event was a great treat to all music lovers as it presented in all 17 concerts and involved 62 artists. Organizing a mega event like this involved the sponsorship and support of over 40 organizations and individuals and the voluntary efforts of many enthusiasts. The organizers deserve the compliments of all art lovers.

# "ಇನ್ನು ಎಲ್ಲಿಗೋಟ"

ನಮ್ಮ ಅಸೋಸಿಯೇಷನ್ನಿನ ಆತ್ಮೀಯ ಸದಸ್ಯರಾದ ಶ್ರೀಮತಿ ಉಮಾ ಪ್ರಭಾಕರ್ ಅವರ ಇತ್ತೀಚೆಗೆ ಪ್ರಕಟವಾದ "ಇನ್ನು ಎಲ್ಲಿಗೋಟ" ಕೃತಿಯ ಅವಲೋಕನ ಕಾರ್ಯಕ್ರಮ ಬೆಂಗಳೂರಿನಲ್ಲಿ ನಡೆಯಿತು. ದಿನಾಂಕ 17.07.2016 ಭಾನುವಾರದಂದು ಜೆ.ಪಿ.ನಗರದ ಕಪ್ಪಣ್ಣ ಅಂಗಳದಲ್ಲಿ ಆಯೋಜಿಸಲಾಗಿತ್ತು. ಈ ಕೃತಿಯ ಒಂದು ಪ್ರವಾಸ ಕಥನ.

ಖ್ಯಾತ ಕವಿಗಳಾದ ಶ್ರೀ. ವಸುಧೇಂದ್ರ, ಶ್ರೀ. ಜಯಂತ ಕಾಯ್ಕಿಣಿ ಹಾಗೂ ಶ್ರೀ. ದಿವಾಕರ್ ಅವರುಗಳು ಭಾಗವಹಿಸಿದ್ದರು. ಬೆಳಗಿನ ತಿಂಡಿ, ಕಾಫಿ ಆದ ನಂತರ 11 ಘಂಟೆಗೆ ಕಾರ್ಯಕ್ರಮ ಆರಂಭವಾಯಿತು. ಇಡೀ ಕಾರ್ಯಕ್ರಮದ ಚುಕ್ಕಾಣಿಯನ್ನು ಹಿಡಿದು ಅಚ್ಚು ಕಟ್ಟಾಗಿ ನಡೆಸಿಕೊಟ್ಟವರು ಹೆಸರಾಂತ ಎಚ್.ಎನ್.ಆರತಿ ಯವರು. ಆರತಿಯವರು ಸಭಿಕರನ್ನು ಸ್ವಾಗತಿಸುವಾಗ ಹಾಗೂ ಮಧ್ಯೆ ಮಧ್ಯೆ ಈ ಕೃತಿಯ ಸ್ವಾರಸ್ಯಕರ ಸನ್ನಿವೇಶಗಳನ್ನು ಅತ್ಯಂತ ಮನೋಜ್ಞವಾಗಿ ಪರಿಚಯ ಮಾಡಿಕೊಟ್ಟರು.



ಮೊದಲಿಗೆ ವಸುಧೇಂದ್ರ ಅವರು ಮಾತನಾಡಿ, ತಮಗೂ ಶ್ರೀಮತಿ ಉಮಾ ಪ್ರಭಾಕರ್ ಅವರಿಗೂ ಇರುವ ಸಮಾನ ಹವ್ಯಾಸ ಕೃತಿಯ ಕೆಲವು ಸ್ವಾರಸ್ಯಕರ ಘಟನೆಗಳನ್ನು ತಮ್ಮ ಅನುಭವದ ಅಂಗಳಕ್ಕೆ ಜೋಡಿಸಿಕೊಂಡು ರಸವತ್ತಾಗಿ ವಿವರಿಸಿದರು.

ನಂತರ ಜಯಂತ ಕಾಯ್ಕಿಣಿಯವರು ತಮ್ಮ ಹಾಗೂ ಉಮಾ ಅವರ ಮುಂಬೈನ ಒಡನಾಟವನ್ನು ಜ್ಞಾಪಿಸಿಕೊಂಡು, ಉಮಾ ಅವರು ಹೇಗೆ ತಮಗೆ ಪ್ರವಾಸದ ಹವ್ಯಾಸವನ್ನು ಹುಟ್ಟಿಸಿದರು ಎಂಬುದನ್ನು ವಿವರಿಸಿದರು. ಪ್ರವಾಸದ ಸಂದರ್ಭಗಳಲ್ಲಿ



ಉಮಾ ಅವರು ತಮಗೆ ಆದ ಅನುಭವಗಳನ್ನು, ತಮ್ಮ ಸಮರ್ಥವಾದ ಭಾಷೆಯಿಂದ, ಓದುಗರಲ್ಲೂ ಅದೇ ಅನುಭವಗಳು ಉಂಟಾಗುವುದನ್ನು ಕೆಲವು ನಿದರ್ಶನಗಳ ಮೂಲಕ ಪ್ರಸ್ತುತಪಡಿಸಿದರು. ಇದಕ್ಕೆ ಉದಾಹರಣೆಯೆಂದರೆ ಕಾಶ್ಮೀರದ ಕಣಿವೆಯಲ್ಲಿ ಜೀಪ್‌ನಲ್ಲಿ ಸಂಜೆ ಕಾರ್ಗಿಲ್ ಮೂಲಕ ಹಾದು ಬಂದಾಗ ಆದ ಭಯಾನಕ ಅನುಭವ.

ಶ್ರೀ. ದಿವಾಕರ್ ಅವರು ಉಮಾ ಅವರ ಕೃತಿಯ ಬಗ್ಗೆ ಮಾತನಾಡುತ್ತಾ, ತಮ್ಮ ಇಂಗ್ಲೀಷ್ ಸಾಹಿತ್ಯದ ಜ್ಞಾನದಿಂದ ಈ ಪ್ರವಾಸ ಕಥನವನ್ನು ವಿಶ್ಲೇಷಿಸಿದರು. ಈ ಕೃತಿಯು ತಮ್ಮ ಗಮನಕ್ಕೆ ಬಂದ ಒಂದು ಉತ್ಕೃಷ್ಟ ಪ್ರವಾಸ ಕಥನವೆಂದು ಅಭಿಪ್ರಾಯಪಟ್ಟರು. ಕೊನೆಯಲ್ಲಿ ಶ್ರೀಮತಿ ಉಮಾ ಪ್ರಭಾಕರ್ ಮಾತನಾಡಿ, ಈ ಕೃತಿಯನ್ನು ಸಿದ್ಧಪಡಿಸುವಾಗ ತಮ್ಮ ನೆನಪಿಗೆ ಬಂದ ಅನುಭವಗಳನ್ನು ಬಹಳ ಸ್ವಾರಸ್ಯಕರವಾಗಿ ವರ್ಣಿಸಿದರು. ನಂತರ ಈ ಕೃತಿಯು ಹೊರ ಬರಲು ಕಾರಣರಾದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಎಚ್.ಎನ್.ಆರತಿಯವರು ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಮಾರಂಭವನ್ನು ಮುಕ್ತಾಯಗೊಳಿಸಿದರು. ಸಭಿಕರೆಲ್ಲರೂ ಸಮಯದ ಪರಿವೆಯೇ ಇಲ್ಲದೇ ಅತ್ಯಂತ ಕುತೂಹಲದಿಂದ ಸುಮಾರು 2 ಗಂಟೆಗಳ ಕಾಲ ನಡೆದ ಈ ಪ್ರವಾಸ ಕಥನದ ಅವಲೋಕನವನ್ನು ಅನುಭವಿಸಿದರು. ಇಂತಹ ಒಳ್ಳೆಯ ಕೃತಿಗಳು ಉಮಾ ಅವರಿಂದ ಇನ್ನೂ ಹೆಚ್ಚಾಗಿ ಬರಲಿ ಎಂಬುದೇ ನಮ್ಮೆಲ್ಲರ ಆಶಯ.

**– ಹೆಚ್. ಎಸ್. ಶ್ರೀನಿವಾಸ್**

**NAMES OF NITYA POOJA DETAILS FROM 16.08.2016 TO 15.09.2016**

| NAMES | DATE OF POOJA | GOTRA | NAKSHATRA |
|---|---|---|---|
| K.N.SRINIVAS RAO | AUGUST 17, 2016 | ATREYASA | HASTA |
| VEDANT VINAY GAONKAR | AUGUST 20, 2016 | | |
| NIHAR JAGDISH | AUGUST 21, 2016 | GAUTAM | KRITIKA |
| K.M.KAMATH | AUGUST 23, 2016 | | |
| P.N.RAMA RAO | AUGUST 23, 2016 | HARITASA | JESHTHA |
| NAGARATNA R. RAO | AUGUST 23, 2016 | HARITASA | VISHAKHA |
| Y.G.GAVASKAR | AUGUST 23, 2016 | | |
| V.K.MURTHY | AUGUST 23, 2016 | KASHYAP | |
| SHREYAS SRINIVAS RAO | AUGUST 26, 2016 | ATREYASA | |
| SHANTA JANNAH | AUGUST 26, 2016 | HAITASA | UTTARA |
| SUNADHA HEBBAR (K.NAGARAJ) | AUGUST 27, 2016 | ANGIRASA | BHARANI |
| SRINIVASAN M.A | SEPTEMBER 2, 2016 | BHARADWAJ | REVATHI |
| RAMANANDA P. NAIK | SEPTEMBER 5, 2016 | KASHYAP | |
| GAVASKAR S.Y. | SEPTEMBER 5, 2016 | | |
| MURLI KIRTHI & MOHANA KIRTHI | SEPTEMBER 5, 2016 | | |
| V.K.MURTHY | SEPTEMBER 8, 2016 | KASHYAP | |
| NAGENDRA ACHARYA | SEPTEMBER 15, 2016 | | ANURADHA |
| (LATE) CHITTARANJAN B.N. | SEPTEMBER 15, 2016 | | |
| B.N.SRIKANTH | SEPTEMBER 15, 2016 | KAUNDINYA | SHRAVAN |

ಪ್ರಿಯ ಸದಸ್ಯರೇ,

ತಮಗೆಲ್ಲಾ ತಿಳಿದಿರುವಂತೆ, ನಮ್ಮ ಅಸೋಸಿಯೇಷನ್ನಿನ ಶ್ರೀ ಸಿದ್ಧಿ ವಿನಾಯಕನಿಗೆ ನಿತ್ಯ ಪೂಜೆಯು ಅನೇಕ ವರ್ಷಗಳಿಂದ ತಪ್ಪದೇ ನಡೆದುಕೊಂಡು ಬರುತ್ತಿದೆ. ಇದಲ್ಲದೇ, ಆಗಾಗ  ಮಾಘಿ, ಅಕ್ಷಯ ತದಿಗೆ ಹಾಗೂ ಗಣೇಶೋತ್ಸವದಂತಹ ವಿಶೇಷ ಪೂಜೆಗಳೂ ನಡೆಯುತ್ತದೆ.

ಈ ಪೂಜೆಗಳನ್ನು ನಿರ್ವಹಿಸುದಕ್ಕಾಗಿ, ನಮ್ಮ ಅಸೋಸಿಯೇಷನ್‌ನ ಸದಸ್ಯರು ಹಾಗೂ ಇತರ ಅಭಿಮಾನಿಗಳು ಉದಾರವಾಗಿ ನೀಡಿದ ದೇಣಿಗೆಯಿಂದ ಪ್ರತ್ಯೇಕ ನಿಧಿಯ ಏರ್ಪಾಟು ಮಾಡಿರುತ್ತದೆ.

ಆದರೆ ಈಗ, ಹೆಚ್ಚುತ್ತಿರುವ ಖರ್ಚುವೆಚ್ಚಗಳಿಂದ, ಈ ನಿಧಿಯಿಂದ ಈ ನಮ್ಮ ಪೂಜೆಯನ್ನು ನಿರ್ವಹಿಸುವುದು ಕಷ್ಟವಾಗಿದೆ. ಆದ್ದರಿಂದ, ಈ ನಿಧಿಯನ್ನು ಬಲಪಡಿಸುವುದು ಅನಿವಾರ್ಯವಾಗಿದೆ.

ಈ ಉದ್ದೇಶದಿಂದ, ನಮ್ಮ ಸದಸ್ಯರುಗಳಿಗೆ ಉದಾರ ದೇಣಿಗೆಗಾಗಿ ಮನವಿ ಮಾಡುತ್ತಿದ್ದೇವೆ. ಪೂಜೆಯ ಅಂದಾಜು ಖರ್ಚುವೆಚ್ಚ ಕೆಳಗೆ ಕೊಟ್ಟಿದೆ. ತಮಗೆ ಇಷ್ಟವಿದ್ದ ದಿವಸ/ದಿವಸಗಳು, ಪೂಜೆಗೋಸ್ಕರ  ದೇಣಿಗೆ ನೀಡಬಹುದು. ಆ ದಿನದ ಪೂಜೆಗೆ ತಮಗೆ ಆಹ್ವಾನ ನೀಡಲಾಗುವುದು ಹಾಗೂ ಪ್ರಸಾದವನ್ನೂ ತಮಗೆ ಕಳುಹಿಸಲಾಗುವುದು.

ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಈ ಮನವಿಗೆ ಸ್ಪಂದಿಸಬೇಕು ಎಂದು ಮತ್ತೊಮ್ಮೆ ಕೋರುತ್ತೇವೆ.

ದಯವಿಟ್ಟು ಈ ಕೆಳಕಂಡ ವಿವರಗಳೊಂದಿಗೆ ನಮ್ಮ ಅಸೋಸಿಯೇಷನ್ನಿನ ಕಛೇರಿಯನ್ನು ಸಂಪರ್ಕಿಸಿ.

ಹೆಸರು :
ತಾರೀಖು :
ನಕ್ಷತ್ರ :
ಗೋತ್ರ :
ಮೊತ್ತ :
ನಿತ್ಯ ಪೂಜೆ/ಅಕ್ಷಯ ತೃತೀಯ/ ಗೌರಿ ಗಣಪತಿ ಪೂಜೆ/ ಮಾಘಿ ಗಣಪತಿ ಪೂಜೆ :
ಇತರ ವಿವರಗಳು :
ಪೂಜೆಯ ವಿವರಗಳು:

| | ಪ್ರತಿ ಪೂಜೆ (Per Pooja) | ಠೇವಣಿ (Fixed deposit Amount -Life time) |
|---|---|---|
| ಮಾಘಿ ಗಣಪತಿ ಪೂಜೆ | 251.00 | 3500.00 |
| ಅಕ್ಷಯ ತೃತೀಯ ಪೂಜೆ | 251.00 | 3500.00 |
| ಗೌರಿ ಗಣಪತಿ ಪೂಜೆ (ಗಣೇಶ ಚತುರ್ಥಿ) | 251.00 | 3500.00 |
| ನಿತ್ಯ ಪೂಜೆ | 251.00 | 3500.00 |

**ವಿ.ಸೂಚನೆ:** ಈಗಾಗಲೇ ನಮ್ಮ ಈ ನಿಧಿಗೆ ಕಾಣಿಕೆ ಕೊಟ್ಟಿರುವರು ಕೂಡ ಹೆಚ್ಚಿನ ಕಾಣಿಕೆ ನೀಡುವುದನ್ನು ಸ್ವಾಗತಿಸುತ್ತೇವೆ.

---

# SHREE SWARNA GOWRI & SHREE MAHAGANAPATHI POOJA MAHOTSAVASHREE DURMUKHI NAMA SAMVATSARA SHALIVAHANA SHAKE 1938 (2016)

## PROGRAMME:

| Day & Date | Timing | Programme |
|---|---|---|
| **04.09.2016** Sunday | 10.00 a.m. | Shree Swarna Gowri Prathishthapana & Pooja |
| | 9.00 p.m. | Pooja & Mangalarthi |
| **05.09.2016** Monday 9.00 p.m. | 9.30 a.m. | Shree Mahaganapathi Prathishthapana & Pooja Pooja & Mangalarathi |
| **06.09.2016** Tuesday | 9.00 a.m. | Pooja & Mangalarathi |
| | 9.00 p.m. | Pooja & Mangalarathi |
| **07.09.2016** Wednesday | 9.00 a.m. | Pooja & Mangalarathi |
| | 9.00 p.m. | Pooja & Mangalarathi |
| **08.09.2016** Thursday | 9.00 a.m. | Pooja & Mangalarathi |
| | 9.00 p.m. | Pooja & Mangalarathi |

| Day & Date | Timing | Programme |
|---|---|---|
| **09.09.2016** Friday | 9.00 a.m | Pooja & Mangalarathi |
| | 5.00 p.m. | Arashina Kumkum for Ladies |
| | 6.30 p.m. | Music concert by Prize winners of Music Competition |
| | 9.00 p.m. | Pooja & Mangalarathi |
| **10.09.2016** Saturday | 9.00 a.m. | Pooja & Mangalarathi |
| | 6.30 p.m. | Music concert by Prize winners of Music Competition |
| | 9.00 p.m. | Pooja & Mangalarathi |
| **11.09.2016** Sunday | 9.00 a.m. | Pooja & Mangalarathi |
| | 10.00 a.m. | Veda Ghosha by Vedikas of Shankar Mutt |
| | 12.00Noon | Procession of Shree Swarna Gowri and Shree Mahaganapathi to Dadar Beach for Immersion |
| | | Prasada Viniyoga |

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.



## ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1938ರ ಶ್ರೀ ದುರ್ಮುಖಿ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ರವಿವಾರ 04.09.2016 ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ ಸೋಮವಾರ 05.09.2016 ರಂದು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ದಶಮಿ ಭಾನುವಾರ ದಿನಾಂಕ 11.09.2016 ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ 11.09.2016ನೇ ಭಾನುವಾರ ಬೆಳಿಗ್ಗೆ 9.00 ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ 01.09.2016 ರೊಳಗೆ ತಲುಪಿಸಿರಿ ಅಥವಾ ಜಟಚುಟ ಮಾಡಿ.

*ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು*

ವಿ.ಸೂ.:

1. ಸೇವಾರ್ಥ ನಡೆಸಲಿಚ್ಛಿಸುವವರು 251/– ರೂ.ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.
2. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 01.09.2016 ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.

ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. 3000/– ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

## 64th Year of Shri Swarna Gauri and Shri Mahaganapathi Pooja

*In keeping with its glorious tradition, your Association is conducting Shri Swarna Gauri and Shri Mahaganapathi Pooja this year also, with all pomp and gaiety from 04th September 2016 to 11th September 2016. This event will be marked by the traditional pooja every morning and cultural programmes followed by traditional pooja in the evenings. The Visarjana will be on 11th September 2016. A detailed programme will be mailed to you in due course. Those desirous of giving "Sevartha" Rs. 251/- or more may please send their cheque to the Mysore Association office, stating the preferred date for pooja along with your name, gotra and nakshatra.*

## ಭಾವಪೂರ್ಣ ಶ್ರದ್ಧಾಂಜಲಿ







**ಪಿ.ಕೆ. ಸಾಲ್ಯಾನ್**

ನಿಧನ : 20.07.2016

ಕುಲಾಲ ಸಂಘ, ಮುಂಬಯಿ ಇದರ ಮಾಜಿ ಅಧ್ಯಕ್ಷರೂ ಹಾಗೂ ಮೈಸೂರು ಅಸೋಸಿಯೇಶನ್‌ನ ಸದಸ್ಯರೂ ಆಗಿರುವ ಪಿ. ಕೆ. ಸಾಲ್ಯಾನ್ ಒಬ್ಬ ಒಳ್ಳೆಯ ಸಂಘ ಜೀವಿ. ಮುದ್ರಣ ಮಾಧ್ಯಮದಿಂದ ಮುಂಬಯಿಯಲ್ಲಿ ಕನ್ನಡ ಸಂಸ್ಕೃತಿಯನ್ನು ಕಟ್ಟುವಲ್ಲಿ ಪ್ರಧಾನ ಭೂಮಿಕೆಯನ್ನು ವಹಿಸಿದವರಲ್ಲಿ ಆರತಿ ಆರ್ಟ್ಸ್ ಪ್ರಿಂಟರ್ಸ್‌ನ ಮಾಲಕರಾದ ಪಿ.ಕೆ. ಸಾಲ್ಯಾನ್ ಕೂಡಾ ಓರ್ವರು. ಸದಾ ಉತ್ಸಾಹದ ಚಿಲುಮೆಯಂತಿದ್ದ ಸಾಲ್ಯಾನ್ ಅವರದ್ದು ಸ್ನೇಹಶೀಲ ವ್ಯಕ್ತಿತ್ವ. ಕುಲಾಲ ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ದುಡಿದಿದ್ದಾರೆ. ಇಂತಹ ಮಹಾನ್ ವ್ಯಕ್ತಿತ್ವ ಇಂದು ನಮ್ಮೊಂದಿಗೆ ಇಲ್ಲ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ಮೈಸೂರು ಅಸೋಸಿಯೇಶನ್ ಮುಂಬಯಿ

***ಸಮಸ್ತ ಬಾಂಧವರಿಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು***

**ತಾ. 15-8-2016 ಶನಿವಾರ**



**ಅಸೋಸಿಯೇಷನ್‌ನಲ್ಲಿ ಬೆಳಿಗ್ಗೆ 10.00ಕ್ಕೆ ಸರಿಯಾಗಿ ಧ್ವಜಾರೋಹಣ ಸಮಾರಂಭ ಜರಗಲಿದೆ.**

***ಎಲ್ಲರಿಗೂ ಹಾರ್ದಿಕ ಸ್ವಾಗತ***

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938